ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಭಾನುವಾರ, ಮೇ 05, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 354 RNI : 27369/75

janathavani@mac.com
www.janathavani.com
☎ 08192 254736 91642 99999



ನಮ್ಮೆಲ್ಲಾ ಗ್ರಾಹಕರಿಗೆ ನಿಮ್ಮ ಕೆಜಿಪಿ ಗೋಲ್ಡ್ ಪ್ಯಾಲೇಸ್ ವತಿಯಿಂದ ಅಕ್ಷಯತೃತೀಯ ಶುಭಕಾಮನೆಗಳು
10ನೇ ವರ್ಷದ ಶುಭಾರಂಭದ ಪ್ರಯುಕ್ತ
ಕೇವಲ 10%VA, 1ರೂ ಮಜೂರಿ.
Extra Charges ಇರುವುದಿಲ್ಲ.
1ಗ್ರಾಂ ತೆಗೆದುಕೊಂಡರೆ ಕೇವಲ 10%VA ಮಾತ್ರ.
ಸದಾ ನಂಬಿಕೆ, ವಿಶ್ವಾಸ,
ಗುಣಮಟ್ಟಕ್ಕೆ ನಿಮ್ಮ
KGP Gold Palace
Vijayalakshmi Road, Davangere.
Ph : 08192-234451/2 Cell : 9148998011
ಮುಂಗಡ ಬುಕ್ಕಿಂಗ್ ಪ್ರಾರಂಭವಾಗಿದೆ.
*Conditions Apply

# ಬಿಜೆಪಿ ಶ್ರೀಮಂತ, ಬಡವರ ಕೈ ಖಾಲಿ

## ಪ್ರಜಾಧ್ವನಿ - 2 ಸಮಾವೇಶದಲ್ಲಿ ಮೋದಿ ಸರ್ಕಾರಕ್ಕೆ ಪ್ರಿಯಾಂಕ ತರಾಟೆ



ದಾವಣಗೆರೆ, ಮೇ 4 - ಚುನಾವಣಾ ಬಾಂಡ್ ಯೋಜನೆಯಿಂದ ಬಿಜೆಪಿಗೆ 7 ಸಾವಿರ ಕೋಟಿ ರೂ. ದೊರೆತಿದ್ದು, ಅದೀಗ ವಿಶ್ವದಲ್ಲೇ ಶ್ರೀಮಂತ ಪಕ್ಷವಾಗಿದೆ. ಆದರೆ, ದೇಶದ ಬಡವರು ಮಾತ್ರ ಇನ್ನಷ್ಟು ಬಡವರಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರ ಹೇಳಿದ್ದಾರೆ.

ನಗರದ ಹೈಸ್ಕೂಲ್ ಮೈದಾನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಅವರ ಪರವಾಗಿ ಮತ ಯಾಚಿಸಲು ಆಯೋಜಿಸಲಾಗಿದ್ದ ಪ್ರಜಾಧ್ವನಿ - 2 ಸಮಾವೇಶದಲ್ಲಿ ಅವರು (5ನೇ ಪುಟಕ್ಕೆ)

# ಅಪಹರಣ ಪ್ರಕರಣ : ರೇವಣ್ಣ ಬಂಧನ, ಸಂತ್ರಸ್ತ ಮಹಿಳೆ ರಕ್ಷಣೆ



ಬೆಂಗಳೂರು, ಮೇ 4 – ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಜೆಡಿಎಸ್ ಶಾಸಕ ಹೆಚ್.ಡಿ. ರೇವಣ್ಣ ಅವರನ್ನು ಬಂಧಿಸಲಾಗಿದೆ. ಇಲ್ಲಿನ ನ್ಯಾಯಾಲಯ ರೇವಣ್ಣ ಅವರ ನಿರೀಕ್ಷಣಾ ಜಾಮೀನು ಅರ್ಜಿ ತಿರಸ್ಕರಿಸಿದ ನಂತರ ವಿಶೇಷ ತನಿಖಾ ತಂಡ ಬಂಧನದ ಕ್ರಮ ತೆಗೆದುಕೊಂಡಿದೆ.

ರೇವಣ್ಣ ಅವರ ತಂದೆ ಹಾಗೂ ಜೆಡಿಎಸ್ ವರಿಷ್ಠ ಹೆಚ್.ಡಿ. ದೇವೇಗೌಡ ಅವರ ಪದ್ಮನಾಭನಗರ ನಿವಾಸದಲ್ಲಿ ರೇವಣ್ಣನನ್ನು ಬಂಧಿಸಲಾಗಿದೆ. ಪ್ರಜ್ವಲ್ ರೇವಣ್ಣ ಲೈಂಗಿಕ ಪೀಡನೆ ಪ್ರಕರಣಕ್ಕೆ ಸಂಬಂಧಿಸಿದ ಮಹಿಳೆಯನ್ನು ಅಪಹರಿಸಿದ ಆರೋಪದ ಮೇಲೆ ರೇವಣ್ಣನನ್ನು ಬಂಧಿಸಲಾಗಿದೆ. (4ನೇ ಪುಟಕ್ಕೆ)

ಶ್ರೀ ದುರ್ಗಾ ಹಾಸ್ಪಿಟಲ್
ಬೇಕಾಗಿದ್ದಾರೆ
ನರ್ಸಿಂಗ್ ಸೂಪರಿಂಡೆಂಡೆಂಟ್
ವಯಸ್ಸು: 30ರಿಂದ 45 ವರ್ಷದ ಒಳಗೆ
(Minimum 5 years of Experience)
ಸ್ಟಾಫ್ ನರ್ಸ್ (ಮಹಿಳೆ)
GNM/B.Sc Nursing
(Minimum 1 year of Experience)
ವಿ.ಸೂ: ವಸತಿ ಸೌಲಭ್ಯ ಇರುವುದಿಲ್ಲ
8ನೇ ಕ್ರಾಸ್, ಸಿದ್ದವೀರಪ್ಪ ಬಡಾವಣೆ ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಎದುರು, ಶಾಮನೂರು ಮುಖ್ಯ ರಸ್ತೆ, ದಾವಣಗೆರೆ-577004
73378 53689, 97439 47362

## ಶ್ರೀಮತಿ ಗಿರಿಜಮ್ಮ ನಿಧನ



ದಾವಣಗೆರೆ ಸಿಟಿ ಜೆ.ಹೆಚ್. ಪಟೇಲ್ ಬಡಾವಣೆ ವಾಸಿ
ಹಳೇಬಾತಿಯ ದಿ. ಕೋಟೆಹಾಳ್ ಕಲ್ಲಪ್ಪನವರ ಧರ್ಮಪತ್ನಿ
**ಶ್ರೀಮತಿ ಗಿರಿಜಮ್ಮನವರು**
ದಿನಾಂಕ 04.05.2024 ಶನಿವಾರ ಸಂಜೆ 5.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 88 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರಿ, ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 5.5.2024ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್ ಹೌಸ್ ಹತ್ತಿರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ :
ಮೊ. 88842-34164, 77608-09031

# ಬಹಿರಂಗ ಪ್ರಚಾರಕ್ಕೆ ಇಂದು ತೆರೆ

## ಮತದಾನಕ್ಕೆ ಸಕಲ ಸಿದ್ಧತೆ



ದಾವಣಗೆರೆ, ಮೇ 3 - ಲೋಕಸಭಾ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಭಾನುವಾರ ಸಂಜೆ 6 ಗಂಟೆಗೆ ತೆರೆ ಬೀಳಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿ ಎಂ.ವಿ. ವೆಂಕಟೇಶ್ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಎಂ.ಸಿ.ಎಂ.ಸಿ.ಯಿಂದ ಅನುಮತಿ ಪಡೆದ ಜಾಹೀರಾತುಗಳನ್ನು ಮುದ್ರಣ ಮಾಧ್ಯಮದಲ್ಲಿ ಮಾತ್ರ ಪ್ರಕಟಿಸಲು ಅವಕಾಶ ಇರುತ್ತದೆ ಎಂದರು.

**144 ನೇ ಸೆಕ್ಷನ್ ಜಾರಿ :** ಭಾನುವಾರ ಸಂಜೆ 6ರಿಂದ ಮತದಾನ ಮುಕ್ತಾಯಗೊಳ್ಳುವವರೆಗೂ ಜಿಲ್ಲೆಯಾದ್ಯಂತ 144ನೇ ಸೆಕ್ಷನ್ ಜಾರಿಗೊಳಿಸಿ ನಿಷೇಧಾಜ್ಞೆ ಜಾರಿಗೊಳಿಸ ಲಾಗುವುದು ಎಂದೂ ಅವರು ತಿಳಿಸಿದರು.

ಈ ಅವಧಿಯಲ್ಲಿ ಯಾವುದೇ ಮದ್ಯ ಮಾರಾಟ ಮಾಡುವಂತಿಲ್ಲ ಮತ್ತು ಜಿಲ್ಲೆಯಾದ್ಯಂತ ಎಲ್ಲಾ ಮದ್ಯದಂಗಡಿಗಳನ್ನು ಮುಚ್ಚಲು ಆದೇಶಿಸಲಾಗಿದೆ.

ಯಾವುದೇ (4ನೇ ಪುಟಕ್ಕೆ)

# ಪ್ರಜ್ವಲ್ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಸಾಧ್ಯತೆ

ಬೆಂಗಳೂರು, ಮೇ 4 – ದೇಶ ತೊರೆದಿರುವ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಸಿ.ಬಿ.ಐ 'ಬ್ಲೂ ಕಾರ್ನರ್' ನೋಟಿಸ್ ಹೊರಡಿಸುವ ಸಾಧ್ಯತೆ ಇದೆ. ಪ್ರಜ್ವಲ್ ವಿರುದ್ಧದ ಪೆನ್‌ಡ್ರೈವ್ ಪ್ರಕರಣದ ವಿಚಾರಣೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಚೇರಿಗೆ ಈ ಮಾಹಿತಿ ನೀಡಿದೆ.

ಅಪರಾಧಕ್ಕೆ ಸಂಬಂಧಿಸಿದಂತೆ ವ್ಯಕ್ತಿಯೊಬ್ಬರ ಮಾಹಿತಿ ಪಡೆಯುವ ಸಲುವಾಗಿ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲಾಗುತ್ತದೆ.

ಪ್ರಜ್ವಲ್ ವಿರುದ್ಧ ಬ್ಲೂ ಕಾರ್ನರ್ ನೋಟಿಸ್ ಹೊರಡಿಸಲು ಸಿ.ಬಿ.ಐ. ಬಳಿ ವಿಶೇಷ ತನಿಖಾ ತಂಡ ಮನವಿ ಕಳಿಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಇಸ್ಕಾನ್ ವತಿಯಿಂದ ಚಾರ್‌ಧಾಮ ಯಾತ್ರೆ



ಯಾತ್ರೆಯ ಅವಧಿ : ರವಿವಾರ, 8ನೇ ಸೆಪ್ಟೆಂಬರ್‌ರಿಂದ ಸೋಮವಾರ, 23ನೇ ಸೆಪ್ಟೆಂಬರ್‌ವರೆಗೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 94212 24448
ISKCON,
7th Main, MCC A Block, Near Reddy Building, Davangere.

## ಪುಣ್ಯಸ್ಮರಣೆ



ಜನನ : 08.06.1936
ನಿಧನ : 05.05.2015

**ಲಿಂ|| ಶರಣ ಶಾಮನೂರು ಬಕ್ಕೇಶಪ್ಪನವರು**
ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಒಂಭತ್ತು ವರ್ಷಗಳಾದವು....
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಶ್ರೀಮತಿ ಶಾಂತಮ್ಮ ಬಕ್ಕೇಶಪ್ಪ ಶಾಮನೂರು
ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು,
ಸಹೋದರರು, ಸಹೋದರಿಯರು
ಮೊಮ್ಮಕ್ಕಳು, ಮರಿಮೊಮ್ಮಕ್ಕಳು.

ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು

## ತೃತೀಯ ವರ್ಷದ ಪುಣ್ಯಸ್ಮರಣೆ



ಜನನ : 18.05.1957 - ನಿಧನ : 05.05.2021
ನನ್ನ ಪೂಜ್ಯ ಪತಿಯವರಾದ
**ಶ್ರೀ ಶೇಖರಪ್ಪ ಎಸ್. ದೊಡ್ಡಮನಿ**
ನೀಲಮ್ ಗಾರ್ಮೆಂಟ್ಸ್, ಸಂಸ್ಥಾಪಕರು ಮತ್ತು ಮಾಲೀಕರು
ಕಾಳಿಕಾ ದೇವಿ ರಸ್ತೆ, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು, ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ...
ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ-ವಾತ್ಸಲ್ಯ ನಮಗೆಲ್ಲಾ ಆದರ್ಶವಾಗಿದೆ.
ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ.

ಇಂತಿ ದುಃಖತಪ್ತರು :
ಶ್ರೀಮತಿ ಶಿವಲೀಲಾ ಶೇಖರಪ್ಪ ದೊಡ್ಡಮನಿ ಮತ್ತು ಮಕ್ಕಳು
ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು
ಸ್ನೇಹಿತರು, ಬಂಧುಗಳು ಹಾಗೂ ಸಿಬ್ಬಂದಿ ವರ್ಗದವರು, ಫೋನ್ : 87620 05533

# ಐದು ವರ್ಷಕ್ಕೊಮ್ಮೆ ನಿಮ್ಮ ಬಳಿ ಬರುವವರನ್ನು ನಿರ್ದಾಕ್ಷಿಣ್ಯವಾಗಿ ಮನೆಗೆ ಕಳಿಸಿ

## ತ್ಯಾವಣಗಿಯಲ್ಲಿ ಪತ್ನಿ ಗಾಯತ್ರಿ ಪರ ಅಬ್ಬರದ ಪ್ರಚಾರದಲ್ಲಿ ಸಂಸದ ಸಿದ್ದೇಶ್ವರ



ದಾವಣಗೆರೆ, ಮೇ 4 - ಚುನಾವಣೆ ಬಂದಾಗ 5 ವರ್ಷಕ್ಕೊಮ್ಮೆ ನಿಮ್ಮ ಬಳಿ ಬಂದು ಮತ ಕೇಳುವವರನ್ನು ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸಿ ಎಂದು ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಸಂಸದ ಜಿ.ಎಂ. ಸಿದ್ದೇಶ್ವರ ಆಕ್ರೋಶ ವ್ಯಕ್ತಪಡಿಸಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತ್ಯಾವಣಗಿಯಲ್ಲಿ ಆಯೋಜಿಸಿದ್ದ ಬಿಜೆಪಿ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

5 ವರ್ಷಕ್ಕೊಮ್ಮೆ ನಿಮ್ಮ ಬಳಿ ಬರುವವರನ್ನು ಯಾವುದೇ ಕಾರಣಕ್ಕೂ ನಂಬಬೇಡಿ. ನಿಮ್ಮ ಜೊತೆಯಲ್ಲಿದ್ದು, ನಿಮ್ಮ ಕಷ್ಟ, ಸುಖಗಳಿಗೆ ಭಾಗಿಯಾಗುವ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರಿಗೆ ನಿಮ್ಮ ಅಮೂಲ್ಯ ಮತಗಳನ್ನು ನೀಡಿ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಸೋಲುವ ಭೀತಿಯಿಂದ ಕ್ಷೇತ್ರದ ತುಂಬಾ ಇಲ್ಲ ಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಕಳೆದ 4 ಚುನಾವಣೆಯಿಂದ ಇದೇ ಕೆಲಸ ಮಾಡುತ್ತಿರುವ ಕಾಂಗ್ರೆಸ್ಸಿಗರಿಗೆ ಕ್ಷೇತ್ರದ ಮತದಾರರು ತಕ್ಕ ಪಾಠ ಕಲಿಸಿದ್ದಾರೆ. ವಾರಂಟಿಯೇ ಇಲ್ಲದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಕಾರ್ಡ್‌ಗಳನ್ನು ಹಂಚುತ್ತಿದೆ. ಇಡೀ ದೇಶದಲ್ಲಿ ಕೇವಲ 230 ಕ್ಷೇತ್ರಗಳಲ್ಲಿ ಮಾತ್ರ ಸ್ಪರ್ಧೆ ಮಾಡಿರುವ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರಕ್ಕೆ ಬರಲು 272 ಜನ ಸಂಸದರು ಬೇಕು ಎನ್ನುವ ಪರಿಜ್ಞಾನವೇ ಇಲ್ಲ. ದೇಶದಲ್ಲಿ 20 ರಿಂದ 30 ಸೀಟು ಗೆಲ್ಲುವ ಕಾಂಗ್ರೆಸ್, ಜನರಿಗೆ ಗ್ಯಾರಂಟಿಗಳ ಮೂಲಕ ಟೋಪಿ ಹಾಕಲು ಹೊರಟಿದೆ ಎಂದು ವಾಗ್ದಾಳಿ ನಡೆಸಿದರು.

20 ವರ್ಷಗಳ ಕಾಲ ಸಂಸದರು ಕ್ಷೇತ್ರಕ್ಕೆ ಏನು ಕೊಡುಗೆ ನೀಡಿದ್ದಾರೆ ಎಂದು ಪ್ರಶ್ನಿಸುವ ಕಾಂಗ್ರೆಸ್ ಅಭ್ಯರ್ಥಿ ಕ್ಷೇತ್ರದ ತುಂಬಾ ಓಡಾಡಿ, ನೋಡಿಕೊಂಡು ಬರಲಿ. 5 ವರ್ಷಕ್ಕೊಮ್ಮೆ ಮಾತ್ರ ಹೊರಗೆ ಬರುವವರಿಗೆ ನಾವು ಮಾಡಿರುವ ಕೆಲಸಗಳು ಕಾಣಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು. ಕಾಂಗ್ರೆಸ್ ಅಭ್ಯರ್ಥಿ ತಮ್ಮ ಪತಿ ರಾತ್ರಿ 2 ಗಂಟೆವರೆಗೂ ಎಚ್ಚರ ಇರುತ್ತಾರೆ ಎಂದು ಹೇಳಿಕೊಳ್ಳುತ್ತಾರೆ. ಕ್ಷೇತ್ರದ ಜನರ ಕೆಲಸ ಕಾರ್ಯಗಳನ್ನು ಕೇಳಲು ಅಷ್ಟೊತ್ತಿನಲ್ಲಿ ಹೊರಗೆ ಹೋಗುವುದಕ್ಕೆ ಆಗುತ್ತದೆಯೇ? ಎಂದರು. 2014 ರಲ್ಲಿ ದೇಶದ ಜನ ಮಾತ್ರ ಮೋದಿ ಜೀ ಅವರನ್ನು ಇಷ್ಟಪಡುತ್ತಿದ್ದರು. ಈಗ ಇಡೀ ಪ್ರಪಂಚವೇ ಮೋದಿ ಜೀ ಅವರನ್ನುಇಷ್ಟ ಪಡುತ್ತಿದೆ. ಈ ಕಾರಣಕ್ಕಾಗಿಯೇ ಮೋದಿ ಜೀ ಮೂರನೇ ಬಾರಿಗೆ ಪ್ರಧಾನಿ ಆಗಬೇಕು ಎಂದು ಕರೆ ನೀಡಿದರು.

ಕಳೆದ 10 ವರ್ಷಗಳಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ರೈಲ್ವೆ, ರಾಷ್ಟ್ರೀಯ ಹೆದ್ದಾರಿ, ಆರೋಗ್ಯ ಕ್ಷೇತ್ರ ಸೇರಿದಂತೆ ರೈತರ ಕಲ್ಯಾಣ, ಮಹಿಳಾ ಸಬಲೀಕರಣಕ್ಕೆ ಸಮರೋಪಾದಿಯಲ್ಲಿ ಕೆಲಸ, ಕಾರ್ಯಗಳು ಆಗಿವೆ. ಕಾಂಗ್ರೆಸ್ಸಿಗರು ಕಪ್ಪು ಕನ್ನಡಕ ಹಾಕಿಕೊಂಡು ನೋಡಿದರೆ ನಾವು ಮಾಡಿರುವ ಕೆಲಸಗಳು ಕಾಣುವುದಾದರೂ ಹೇಗೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಾಯಕೊಂಡ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಪ್ರೊ.ಎನ್. ಲಿಂಗಣ್ಣ, ಮಂಡಲ ಅಧ್ಯಕ್ಷ ಶ್ಯಾಗಲೆ ದೇವೇಂದ್ರಪ್ಪ, ಎಸ್.ಟಿ. ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ಯುವ ಮೋರ್ಚಾ ಉಪಾಧ್ಯಕ್ಷ ಜಿ.ಎಸ್. ಶ್ಯಾಮ್, ಮುಖಂಡ ಅಣಬೇರು ಜೀವನಮೂರ್ತಿ, ಮಂಡಲ ಪ್ರಧಾನ ಕಾರ್ಯದರ್ಶಿ ಕೃಷ್ಣಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿಲ್ ನಾಯ್ಕ್ ಇದ್ದರು.

# ದೇಶದ ಸುಭದ್ರತೆಗೆ ಬಿಜೆಪಿ ಆಡಳಿತ ಅವಶ್ಯಕ

## ಜಗಳೂರಿನ ರೋಡ್ ಶೋದಲ್ಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ

ಜಗಳೂರು, ಮೇ 4 - ಸುಭದ್ರತೆಯ ದೇಶ ಕಟ್ಟಲು ಬಿಜೆಪಿ ಆಡಳಿತದ ಅವಶ್ಯಕತೆಯಿದೆ. ಬಿಜೆಪಿ ಗೆಲ್ಲಿಸಿ ಮೋದಿಜಿ ಅವರನ್ನು ಪ್ರಧಾನಿಯನ್ನಾಗಿಸೋಣ ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಹೇಳಿದರು.



ಪಟ್ಟಣದ ಮಹಾತ್ಮಗಾಂಧಿ ವೃತ್ತದಿಂದ ಅಂಬೇಡ್ಕರ್ ವೃತ್ತದವರೆಗೆ ರೋಡ್ ಶೋ ನಡೆಸಿ ಅವರು ಮಾತನಾಡಿದರು.

ದೇಶದ ಭವಿಷ್ಯ ರೂಪಿಸಲು ದಿನಗಣನೆ ಉಳಿದಿದ್ದು. ಸೂಕ್ತ ಅಭ್ಯರ್ಥಿ ಆಯ್ಕೆಯ ನಿರ್ಣಯ ಮತದಾರರ ಕೈಯಲ್ಲಿದೆ. ಪ್ರಧಾನಿ ಮೋದಿಜಿ ಅವರು ಹಗಲಿರುಳು ನಿದ್ರೆಗೆ ಜಾರದೆ ದೇಶದ ರೈತರ, ಸೈನಿಕರ, ಮಹಿಳೆಯರ ಜನಪರ ದೇಶದ ಸಮಗ್ರ ಅಭಿವೃದ್ದಿ ಬಗ್ಗೆ ಕಾಳಜಿ ಹೊಂದಿದ್ದಾರೆ. ದಶಕಗಳಲ್ಲಿ ದೇಶವನ್ನು ಅಭಿವೃದ್ದಿ ಪರ್ವದತ್ತ ಸಾಗುತ್ತಿದೆ. ಅವರ ಕನಸನ್ನು ನನಸಾಗಿಸಬೇಕು ಎಂದು ತಿಳಿಸಿದರು.

ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಮಾತನಾಡಿ, ನನ್ನ ಆಡಳಿತಾವಧಿಯಲ್ಲಿ ಭದ್ರಾ ಮೇಲ್ದಂಡೆ ಹಾಗೂ 57 ಕೆರೆ ತುಂಬಿಸುವ ಯೋಜನೆಗಳು ಸಾಕಾರಗೊಂಡಿವೆ. ತಾಲ್ಲೂಕಿನ 5 ಕೆರೆಗಳಿಗೆ ನೀರು ಹರಿಸಲಾಗಿದೆ. ನೀರಾವರಿ ಯೋಜನೆ ಬಿಜೆಪಿ ಆಡಳಿತದ ಸಾಧನೆ. ಸಿದ್ದೇಶ್ವರ್ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ್ ಅವರಿಗೆ ಅತ್ಯಂತ ಅಂತರದಲ್ಲಿ ಬೂತ್ ಮಟ್ಟದಲ್ಲಿ ಲೀಡ್ ಕೊಡಬೇಕು ಎಂದು ಕರೆ ನೀಡಿದರು.

ಮಾಜಿ ಶಾಸಕ ಎಚ್.ಪಿ. ರಾಜೇಶ್ ಮಾತನಾಡಿ, ಬಹಿರಂಗ ಪ್ರಚಾರಕ್ಕೆ ಕೇಲವೇ ಗಂಟೆಗಳು ಬಾಕಿ ಉಳಿದಿದ್ದು ಬೂತ್ ಪ್ರಮುಖರು ಮತದಾರರನ್ನು ಮನವೊಲಿಸಿ ಹೆಚ್ಚು ಹೆಚ್ಚು ಮತಗಳಿಂದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಗೆಲ್ಲಿಸಿ ಸಂಸತ್ತಿಗೆ ಕಳಿಸೋಣ ಎಂದು ಮನವಿ ಮಾಡಿದರು.

ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರನ್ನು ಗೆಲ್ಲಿಸಿ ಮತ್ತೊಮ್ಮೆ ನರೇಂದ್ರ ಮೋದಿಜಿ ಅವರನ್ನು ದೇಶದ ಪ್ರಧಾನಿಯನ್ನಾಗಿಸೋಣ. ಒಗ್ಗಟ್ಟಿನಿಂದ ಬಿಜೆಪಿ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಅತ್ಯಂತ ಹೆಚ್ಚು ಮತಗಳನ್ನು ಹಾಕಿಸಬೇಕು ಎಂದು ಜಿ. ಅನಿತ್ ಕುಮಾರ್ ಮನವಿ ಮಾಡಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ನವೀನ್ ಕುಮಾರ್, ಕೆ.ಎಸ್.ನರೇಂದ್ರ, ಬಿಜೆಪಿ ಮಂಡಲ ಅಧ್ಯಕ್ಷ ಮಹೇಶ್, ಶ್ರೀಮತಿ ಇಂದಿರಾ ರಾಮಚಂದ್ರ, ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಕಲ್ಲೇರುದ್ರೇಶ್, ಜಯಲಕ್ಷ್ಮಿ ಮಹೇಶ್, ಎಸ್.ಕೆ. ಮಂಜುನಾಥ್ ಮುಂತಾದವರು ಇದ್ದರು.

# ಗಾಯತ್ರಿ ಸಿದ್ದೇಶ್ವರ ಪರ ಯದುವೀರ್ ಕೃಷ್ಣದತ್ತ ಒಡೆಯರ್ ಮತಯಾಚನೆ



ದಾವಣಗೆರೆ, ಮೇ 4- ಆರ್ಯ ವೈಶ್ಯ ಸಮಾಜದ ಬಿಜೆಪಿ ಬೆಂಬಲಿಗರ ಸಭೆಯಲ್ಲಿ ಮೈಸೂರು ಮಹಾರಾಜ, ಮೈಸೂರು - ಕೊಡಗು ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರ ಪರ ಮತಯಾಚಿಸಿದರು.


ಈ ವೇಳೆ ಸಂಸದ ಜಿ.ಎಂ.ಸಿದ್ದೇಶ್ವರ, ಅಭ್ಯರ್ಥಿ ಗಾಯಿತ್ರಿ ಸಿದ್ದೇಶ್ವರ, ದೂಡಾ ಮಾಜಿ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್, ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್, ಮುಖಂಡರಾದ ತಿಪ್ಪೇಸ್ವಾಮಿ ಶೆಟ್ರು, ಡಾ.ಬಿ.ಎಸ್. ನಾಗಪ್ರಕಾಶ್, ಬಾಲಚಂದ್ರ, ಆರ್ಯವೈಶ್ಯ ಸಮಾಜ ಬಾಂಧವರು ಇದ್ದರು.

## ನಗರದಲ್ಲಿ ಇಂದು ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನಾಚರಣೆ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕುವೆಂಪು ಕನ್ನಡ ಭವನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ 110ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಸಾಂಸ್ಕೃತಿಕ ಚಿಂತಕ ಹಾಗೂ ವಿಶ್ರಾಂತ ಉಪನ್ಯಾಸಕ ಜಿ.ಎಸ್. ಸುಭಾಷ್ ಚಂದ್ರ ಬೋಸ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹರಪನಹಳ್ಳಿ ಎಡಿಬಿ ಎಫ್.ಜಿ. ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ. ಎ.ಎಂ. ರಾಜಶೇಖರಯ್ಯ ಅವರು ಜನ ಸಾಮಾನ್ಯರತ್ತ ಕನ್ನಡ ಸಾಹಿತ್ಯ ಪರಿಷತ್ತು ವಿಷಯ ಕುರಿತು ಉಪನ್ಯಾಸ ನೀಡುವರು. ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಅವರಿಗೆ ಈ ಸಂದರ್ಭದಲ್ಲಿ ಸನ್ಮಾನಿಸಲಾಗುವುದು. ಸಂಗೀತ ಶಿಕ್ಷಕ ರೇವಣಸಿದ್ದಪ್ಪ, ವಚನಾಮೃತ ಬಳಗದ ಸಂಸ್ಥಾಪಕರಾದ ಶ್ರೀಮತಿ ಸೌಮ್ಯ ಸತೀಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

## ನಗರದಲ್ಲಿ ನಾಳೆ ವಚನ ಗಾಯನ, ವಚನ ಕಂಠಪಾಠ ಸ್ಪರ್ಧೆ



ದಾವಣಗೆರೆ, ಮೇ 4 - ನಗರದ ದೊಡ್ಡಪೇಟೆಯಲ್ಲಿ ರುವ ವಿರಕ್ತ ಮಠದಲ್ಲಿ ನಾಡಿದ್ದು ದಿನಾಂಕ 6ರ ಸೋಮವಾರ ಸಂಜೆ 4 ಗಂಟೆಗೆ ಬಸವ ಜಯಂತಿ ಪ್ರಯುಕ್ತ ಮಕ್ಕಳಿಗಾಗಿ ವಚನ ಗಾಯನ, ವಚನ ಕಂಠಪಾಠ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ವಿಜೇತರಿಗೆ ಬಸವ ಜಯಂತಿ ದಿನದಂದು ಬಹುಮಾನ ವಿತರಣೆ ಮಾಡಲಾಗುವುದು ಎಂದು ಕಾರ್ಯಕ್ರಮದ ಸಂಚಾಲಕ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9945572979, 9611889151, 9008940914

## ರಾಣೇಬೆನ್ನೂರಿನಲ್ಲಿ ವಚನ ಗಾಯನ ಸ್ಪರ್ಧೆ

ರಾಣೇಬೆನ್ನೂರು, ಮೇ 4- ತಾಲ್ಲೂಕು ನಿವೃತ್ತ ಲಿಂಗವಂತ ಸಮಾಜ ನೌಕರರ ಸಂಘದಿಂದ ಬಸವ ಜಯಂತಿಯ ಪ್ರಯುಕ್ತ ಮೃತ್ಯುಂಜಯ ನಗರದ ಶ್ರೀ ಚನ್ನೇಶ್ವರ ಮಠದಲ್ಲಿ ಇದೇ ದಿನಾಂಕ 9ರ ಗುರುವಾರ ಬೆಳಗ್ಗೆ 10ಕ್ಕೆ ಬಸವೇಶ್ವರ ವಚನ ಗಾಯನ ಸ್ಪರ್ಧೆ ಏರ್ಪಡಿಸಲಾಗಿದೆ. ಈ ವಚನ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸು ವವರು ಇದೇ ದಿನಾಂಕ 7ರೊಳಗೆ ಮೊಬೈಲ್ : 9964030664, 94499 83689, 9620266727ರಲ್ಲಿ ಸಂಪರ್ಕಿಸಿ ಹೆಸರು ನೋಂದಾಯಿಸಬಹುದು.

## ನಗರದಲ್ಲಿ ಇಂದು ಗಾಯತ್ರಿ ಸಿದ್ದೇಶ್ವರ ಮತ ಯಾಚನೆ



ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಅವರು ದಾವಣಗೆರೆ ದಕ್ಷಿಣ ಹಾಗೂ ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಇಂದು ಮತ ಯಾಚಿಸಲಿದ್ದಾರೆ. ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅರಳಿಮರದಿಂದ ರ್‍ಯಾಲಿ ಪ್ರಾರಂಭವಾಗಿ ವೆಂಕಟೇಶ್ವರ ವೃತ್ತ, ಆನೆಕೊಂಡ, ಮಟ್ಟಿಕಲ್ಲು, ಬಂಬೂಬಜಾರ್, ವಿಠಲ ಮಂದಿರ, ಬಂಬೂಬಜಾರ್ ರಸ್ತೆ ಮೂಲಕ ಗಣೇಶ್ ಹೋಟೆಲ್ ಬಳಿ ಮುಕ್ತಾಯವಾಗಲಿದೆ.

ಬೆಳಿಗ್ಗೆ 9.30 ರಿಂದ 10.30 ರ ವರೆಗೆ ಉತ್ತರ ಕ್ಷೇತ್ರದ ವಿದ್ಯಾನಗರ, ಆಂಜನೇಯ ಬಡಾವಣೆ, ಸಿದ್ಧವೀರಪ್ಪ ಬಡಾವಣೆ, ನಿಜಲಿಂಗಪ್ಪ ಬಡಾವಣೆ, ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ರೋಡ್ ಶೋ ಮೂಲಕ ಮತ ಯಾಚಿಸಲಿದ್ದಾರೆ. 11 ರಿಂದ 12 ಗಂಟೆವರೆಗೂ ಪಿಜೆ ಬಡಾವಣೆ, ಎಂಸಿಸಿ 'ಎ' ಬ್ಲಾಕ್, 3 ರಿಂದ 6 ಗಂಟೆವರೆಗೂ 31ನೇ ವಾರ್ಡ್, 41 ವಾರ್ಡ್ ಎಸ್‌ಓಜಿ ಕಾಲೋನಿ, ಶ್ರೀರಾಮ ಬಡಾವಣೆಯಲ್ಲಿ ಮತಯಾಚಿಸಲಿದ್ದಾರೆ.

## ನಗರದಲ್ಲಿ ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಹೋಮಿಯೋಪಥಿ ವೈದ್ಯಕೀಯ ಸಂಘ ಮತ್ತು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಇವರ ಜಂಟಿ ಆಶ್ರಯದಲ್ಲಿ ಕರುಣಾ ಜೀವ ಕಲ್ಯಾಣ ಟ್ರಸ್ಟ್ ಕಚೇರಿ ಆವರಣದಲ್ಲಿ ಇಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರ ವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ. ಮಾವಿಶೆಟ್ಟರ್, ಡಾ.ಕೆ.ಆರ್. ಶರತ್‌ರಾಜ್, ಡಾ.ಸಿ.ಎನ್.ಕೋಟಿಹಾಳ್, ಡಾ.ಎ.ಎನ್. ಸುಂದರೇಶ್ ಡಾ. ಆರತಿ ಸುಂದರೇಶ್, ಡಾ.ಜಿ.ಎಸ್. ಗಿರೀಶ್, ಡಾ. ವಿಶ್ವನಾಥ್ ಹಳ್ಳಿಕೇರಿ, ಡಾ. ಎಸ್.ರಂಗರಾಜನ್ ತಪಾಸಣಾ ಶಿಬಿರದಲ್ಲಿರುವರು.

## ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರ ಜೆಡಿಎಸ್‌ನಿಂದ ಮತ ಯಾಚನೆ

ದಾವಣಗೆರೆ, ಮೇ 4- ಲೋಕಸಭಾ ಚುನಾವಣೆಯ ಬಿಜೆಪಿ ಅಭ್ಯರ್ಥಿ ಶ್ರೀಮತಿ ಗಾಯತ್ರಿ ಸಿದ್ದೇಶ್ವರ ಅವರ ಪರವಾಗಿ ನಗರದ ವಾರ್ಡ್ 8ರ ಜಾಲಿನಗರದಲ್ಲಿ ನಡೆಸಿದ ಪ್ರಚಾರ ಕಾರ್ಯದಲ್ಲಿ ಜೆಡಿಎಸ್ ಜಿಲ್ಲಾ ಎಸ್ಸಿ ಘಟಕದ ಅಧ್ಯಕ್ಷ ಸಿ.ಆಂಜನಪ್ಪ ಕಡತಿ, ದಕ್ಷಿಣ ಜೆಡಿಎಸ್ ಯುವ ಅಧ್ಯಕ್ಷ ಶ್ರೀನಿವಾಸ್, ಎಚ್.ದುಗ್ಗೇಶ್, ಆಕಾಶ್, ನವೀನ್, ರಾಮ, ಆನಂದ್, ಅರಿಶ್, ನಾಗರಾಜ್, ವಿನಯ್, ಪ್ರೇಮ್, ಸಿದ್ದೇಶ್, ಮಾಂತೇಶ್, ಅಂಜನಿ ಮತ್ತಿತರರು ಭಾಗವಹಿಸಿದ್ದರು.





## 16ನೇ ವಾರ್ಡ್‌ನಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರ ಮತಯಾಚನೆ

ದಾವಣಗೆರೆ, ಮೇ 4- ಉತ್ತರ ವಿಧಾನಸಭಾ ಕ್ಷೇತ್ರದ 16ನೇ ವಾರ್ಡ್‌ನಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರವಾಗಿ ಮನೆ ಮನೆಗೆ ತೆರಳಿ ನರೇಂದ್ರ ಮೊದೀಜಿ ನೇತೃತ್ವದ ಕೇಂದ್ರ ಸರ್ಕಾರದ ಅಭಿವೃದ್ಧಿ ಸಾಧನೆಗಳ ಕರಪತ್ರ ನೀಡಿ ಮತಯಾಚನೆ ಮಾಡಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಕಾನೂನು ಪ್ರಕೋಷ್ಟದ ಜಿಲ್ಲಾ ಸಂಚಾಲಕ ಮತ್ತು ವಕೀಲರ ಸಹಕಾರ ಸಂಘದ ಅಧ್ಯಕ್ಷ ಹೆಚ್.ದಿವಾಕರ್, ಕಾಂತರಾಜ್, ಗೌರಮ್ಮ ಪಾಟೀಲ್, ಬಿಜೆಪಿ ಯುವ ಮೋರ್ಚಾ ಉಪಾಧ್ಯಕ್ಷ ಟಿ.ಎನ್. ಕಿರಣ, ಎಸ್.ಮಂಜುನಾಥ, ರವಿ, ಹನುಮಂತಪ್ಪ ಮತ್ತು ಇತರರು ಉಪಸ್ಥಿತರಿದ್ದರು.

# ಈ ದೇಶ ಕಟ್ಟಿದ್ದು ಶ್ರೀಮಂತರಲ್ಲ, ಕಾರ್ಮಿಕರು

## ಹರಪನಹಳ್ಳಿ : ಕಾರ್ಮಿಕರ ದಿನಾಚರಣೆಯಲ್ಲಿ ಎಐಕೆಎಸ್ ರಾಜ್ಯ ಕಾರ್ಯದರ್ಶಿ ಜನಾರ್ದನ್

ಹರಪನಹಳ್ಳಿ, ಮೆ 3 - ದೇಶದ ಎಲ್ಲಾ ಕಾರ್ಮಿಕರಿಗೂ ಕಾರ್ಮಿಕ ಹಕ್ಕು ಸಿಗಬೇಕೆಂದು ಮೊದಲು ಹೋರಾಟ ಮಾಡಿದ್ದೇ ಎಐಟಿಯುಸಿ ಕಾರ್ಮಿಕ ಸಂಘಟನೆ ಎಂದು ಎಐಕೆಎಸ್ ರಾಜ್ಯ ಕಾರ್ಯದರ್ಶಿ ಜನಾರ್ದನ್ ತಿಳಿಸಿದರು.




ಪಟ್ಟಣದ ಹಳೇ ಬಸ್ ನಿಲ್ದಾಣದ ಬಳಿಯಿರುವ ಸರ್ಕಾರಿ ನೌಕರರ ಭವನದಲ್ಲಿ ಎಐಟಿಯುಸಿ ಸಂಘಟನೆ ನೇತೃತ್ವದಲ್ಲಿ ಬುಧವಾರ ನಡೆದ ವಿಶ್ವ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


ವಿವಿಧ ಕ್ಷೇತ್ರಗಳ ದುಡಿಯುವ ಕಾರ್ಮಿಕರು ದಿನಕ್ಕೆ 8 ತಾಸು ಕೆಲಸ ಮಾಡಬೇಕು, ಕನಿಷ್ಟ ವೇತನ, ವಿಮಾ ಪರಿಹಾರ ಸೇರಿದಂತೆ ಪ್ರತ್ಯೇಕ ಕಾರ್ಮಿಕ ಕಾಯ್ದೆ ಜಾರಿ ಮಾಡಬೇಕೆಂದು ನಿರಂತರ ಹೋರಾಟದ ಫಲವಾಗಿ ಇಂದು ಕಾರ್ಮಿಕರು 8 ತಾಸು ಕೆಲಸ ಮಾಡುತ್ತಿದ್ದಾರೆ ಎಂದರು.

ಎಐಟಿಯುಸಿ ಕಾರ್ಯದರ್ಶಿ ಗುಡಿಹಳ್ಳಿ ಹಾಲೇಶ್ ಮಾತನಾಡಿ, ಈ ದೇಶ ಕಟ್ಟಿದ್ದು ಶ್ರೀಮಂತರಲ್ಲ, ಕಾರ್ಮಿಕರು. ಪ್ರತಿಯೊಂದು ಪ್ರಗತಿಯ ಹಿಂದೆ ಕಾರ್ಮಿಕರ ಶ್ರಮ ತುಂಬಾ ಇದೆ ಎಂದು ಹೇಳಿದರು. ಪ್ರತಿಯೊಬ್ಬ ಕಾರ್ಮಿಕರು ಮೇ 7ರಂದು ತಪ್ಪದೇ ಮತದಾನ ಮಾಡಿ ದೇಶದ ಪ್ರಜಾಪ್ರಭುತ್ವದ ಗೌರವವನ್ನು ಕಾಪಾಡಬೇಕು ಎಂದರು.

ಸಾರಿಗೆ ಕಾರ್ಮಿಕ ಮುಖಂಡ ಜೆ.ಕೊಟ್ರೇಶ್, ಸ್ಲಂಬೋರ್ಡ್ ಯೋಜನೆಯ ವ್ಯವಸ್ಥಾಪಕ ತರುಣ್ ಇಕ್ಬಾಲ್‌ಸಿಂಗ್, ಎಐಎಸ್‌ಎಫ್ ಮುಖಂಡ ಹರ್ಷ ಮಾತನಾಡಿದರು.

ಹೆಚ್.ಎಂ.ಸಂತೋಷ್, ರಮೇಶನಾಯ್ಕ, ಹಲಗಿ ಸುರೇಶ್, ಟಿ.ಬಸಮ್ಮ, ರೂಪ, ಹಗರಿಗುಡಿಹಳ್ಳಿ ಶಿವರಾಮ್, ಕೋಟ್ಯಪ್ಪ, ರಂಗಪ್ಪ, ಸುಮಂಗಲ ತಾಯಿ, ಬಳಿಗಾನೂರು ಕೊಟ್ರೇಶ್, ಬಾಷಾಸಾಬ್, ಅರುಣ, ದೊಡ್ಡಬಸವರಾಜ, ದಾದಾಪೀರ್, ಮಾರುತಿ ಸೇರಿದಂತೆ ಮತ್ತಿತರರಿದ್ದರು.

## ಕಥೆಗಾರ ಪಾಂಡುರಂಗಯ್ಯ ನಿಧನ



ದಾವಣಗೆರೆ, ಮೇ 4- ಕನ್ನಡದ ಹೆಸರಾಂತ ಕಥೆಗಾರ, ಲೇಖಕ, ಅನುವಾದಕ ಬುಳಸಾಗರ ಪಾಂಡುರಂಗಯ್ಯ (84) ರಾತ್ರಿ ನಗರದಲ್ಲಿ ನಿಧನರಾದರು. ಇಬ್ಬರು ಪುತ್ರಿಯರು ಮತ್ತು ಓರ್ವ ಪುತ್ರನನ್ನು ಅವರು ಅಗಲಿದ್ದಾರೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಇಂಜಿನಿಯರ್ ಆಗಿ ನಿವೃತ್ತರಾಗಿದ್ದ ಅವರು ಚನ್ನಗಿರಿ ತಾಲ್ಲೂಕಿನ ಹಿರೇಕೋಗಲೂರಿನಲ್ಲಿ 1940ರಲ್ಲಿ ಜನಿಸಿದ್ದರು. ತಂದೆ ಗುಡ್ಡಪ್ಪನವರು ಶಿಕ್ಷಕರಾಗಿದ್ದರು.

ಹೆಸರಾಂತ ಕವಿ, ಕಥೆಗಾರ, ಸಾಕ್ಷ್ಯಚಿತ್ರಗಳ ನಿರ್ದೇಶಕ ಚಲಂ ಬೆನ್ನೂರ್ಕರ್ ಅವರ ಸೋದರ ಮಾವನವರಾಗಿದ್ದ ಪಾಂಡುರಂಗಯ್ಯ, ಪ್ರಚಾರ, ಪ್ರಸಿದ್ಧಿಗಳಿಂದ ದೂರವಿದ್ದು, ಪುಸ್ತಕ ಪ್ರಕಟಣೆಗೂ ತಲೆಕೆಡಿಸಿ ಕೊಳ್ಳದ ಅಪರೂಪದ ಕಥೆಗಾರರು. ಕಥೆ, ಕವನ, ಮಕ್ಕಳ ಸಾಹಿತ್ಯ, ವೈಚಾರಿಕ ಲೇಖನ, ಅನುವಾದ ಹೀಗೆ ಬಹುಮುಖವಾಗಿ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದರು. ಕಳೆದ ನಾಲ್ಕೈದು ದಶಕಗಳಿಂದ ಅವರು ನಿರಂತರವಾಗಿ ಪ್ರಜಾಮತ, ಪ್ರಜಾವಾಣಿ, ಸುಧಾ, ತರಂಗ, ಮಯೂರ, ಕರ್ಮವೀರ, ಪ್ರಪಂಚ, ತರಳಬಾಳು, ಸಿದ್ಧಗಂಗಾ ಮುಂತಾದ ನಿಯತಕಾಲಿಕಗಳಲ್ಲಿ ಬರೆದರು. ಸಾವಿರಾರು ಪುಟಗಳಷ್ಟು ಅವರ ಬರಹಗಳನ್ನೆಲ್ಲಾ ಪ್ರಕಟಿಸಿದ್ದರೆ ಮೂವತ್ತಕ್ಕೂ ಹೆಚ್ಚು ಪುಸ್ತಕಗಳಾಗುತ್ತಿದ್ದವು. ಅಭಿಮಾನಿಗಳ ಒತ್ತಾಯಕ್ಕೆ ಮಣಿಮೇಖಲೆ (2016, ಮುನ್ನುಡಿ - ಡಾ. ಪ್ರಹ್ಲಾದ ಅಗಸನಕಟ್ಟೆ) ಶಂಬೂಕ ವಧೆ (2018, ಮುನ್ನುಡಿ - ಡಾ. ಲೋಕೇಶ ಅಗಸನಕಟ್ಟೆ) ಮತ್ತು 'ಗಿಣಿರಾಮ ತಂದ ಮಾಂತ್ರಿಕ ಮಾವಿನಹಣ್ಣು' ಎಂಬ ಮಕ್ಕಳ ಕಥಾ ಸಂಕಲನವನ್ನು ಪ್ರಕಟಿಸಿದ್ದರು. 'ಮಣಿಮೇಖಲೆ' ಕಥಾಸಂಕಲನವನ್ನು ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಇಂಗ್ಲಿಷ್ ವಿಭಾಗದ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಗೆ ಅನುವಾದಿಸಿದ್ದರು. ದಾವಣಗೆರೆಯಲ್ಲಿ 2 ದಶಕಗಳಿಂದ ವಾಸವಾಗಿದ್ದರೂ ಸಾಹಿತ್ಯ ವಲಯ ಗುರುತಿಸದೆ ಹೋಗಿದ್ದು ವಿಪರ್ಯಾಸ.

## 19ನೇ ವರ್ಷದ ಪುಣ್ಯಸ್ಮರಣೆ



**ಜಿ.ಸಿ. ರುದ್ರಮುನಿ, ASI**

ನೀವು ನಮ್ಮನ್ನಗಲಿ ಇಂದಿಗೆ 19 ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿರುವ,

ಪತ್ನಿ : **ಶ್ರೀಮತಿ ಗೌರಮ್ಮ ಜಿ.ಎಂ.**

ಮಗಳು : **ಶ್ರೀಮತಿ ಆರ್. ಲತಾ ಮಂಜಣ್ಣ ಎಸ್.ಬಿ.,**

ಮಗ : **ಆರ್. ವೀರೇಂದ್ರ, ಶ್ರೀಮೈತ್ರಿ,**

ಮೊಮ್ಮಕ್ಕಳು : **ಓಂಪ್ರಕಾಶ್, ಶಿವಾನಿ ಹಾಗೂ ಬಂಧು-ಮಿತ್ರರು.**

## ಹೆಚ್. ಆರ್. ಪ್ರಭಾಕರ್ ವಿಶ್ವಕರ್ಮ ಸಾಯುಜ್ಯ



ದಾವಣಗೆರೆ ಜಿಲ್ಲಾ ವಿವೇಕಾನಂದ ಬಡಾವಣೆ ವಾಸಿ

**ಹೆಚ್. ಆರ್. ಪ್ರಭಾಕರ್**

(ಯುಬಿಡಿಟಿ, ನಿವೃತ್ತ ಪ್ರಾಧ್ಯಾಪಕರು) ಇವರು ದಿನಾಂಕ 4.5.2024ರ ಶನಿವಾರ ಸಂಜೆ 5.30ಕ್ಕೆ ವಿಶ್ವಕರ್ಮ ಸಾಯುಜ್ಯ ಹೊಂದಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 62 ವರ್ಷ ವಯಸ್ಸಾಗಿತ್ತು.

ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು - ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.5.2024ರ ಸೋಮವಾರ ಮಧ್ಯಾಹ್ನ 1.30ಕ್ಕೆ ನಗರದ ಗ್ಲಾಸ್‌ಹೌಸ್ ಪಕ್ಕದಲ್ಲಿರುವ ವೈಕುಂಠಧಾಮದಲ್ಲಿ ವಿಶ್ವಕರ್ಮ ಸಮಾಜದ ವಿಧಿ-ವಿಧಾನದಂತೆ ನೆರವೇರಿಸಲಾಗುವುದು.

**ದುಃಖತಪ್ತರು : ಶ್ರೀಮತಿ ಜಯಶ್ರೀ ಪ್ರಭಾಕರ ಮತ್ತು ಮಕ್ಕಳು, ಅಳಿಯಂದಿರು ಹಾಗೂ ಸಹೋದರರು, ದಾವಣಗೆರೆ.**

**ಯುಬಿಡಿಟಿ ಆಡಳಿತ ಮಂಡಳಿ**

**ಮೊ : 98864 27291, 80956 44007**

## ಕಮಲ್ಲಮ್ಮ ನಿಧನ



ದಾವಣಗೆರೆ ಸಿಟಿ ಆವರಗೆರೆ ಎಜಿಎಂ ಲೇಔಟ್ ವಾಸಿ ಸಣ್ಣ ಬಸವರಾಜಯ್ಯ ಅವರ ಧರ್ಮಪತ್ನಿ

**ಶ್ರೀಮತಿ ಕಮಲಮ್ಮ**

ಇವರು ದಿನಾಂಕ : 04.05.2024 ರಂದು ಶನಿವಾರ ಸಂಜೆ 6.35ಕ್ಕೆ ನಿಧನರಾದರು. ಮೃತರಿಗೆ 70 ವರ್ಷ ವಯಸ್ಸಾಗಿತ್ತು. ಪತಿ, ಮೂವರು ಪುತ್ರಿಯರು, ಓರ್ವ ಪುತ್ರ, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 05.05.2024 ರಂದು ಭಾನುವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಅಣಜಿ ರುದ್ರಭೂಮಿಯಲ್ಲಿ ನೆರವೇರಲಿದೆ.

**ಇಂತಿ ದುಃಖತಪ್ತ ಕುಟುಂಬ ವರ್ಗ : ಮಂಜುನಾಥ್ KSRTC ಅಣಜಿ**

**82771 69234**

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 04.05.2024 ರಂದು ನಿಧನರಾದ ನಮ್ಮ ಕೇಂದ್ರದ ಮಾಜಿ ಸದಸ್ಯರಾದ

**ಶ್ರೀ ಬಿ.ಜಿ. ಶಿವಶಂಕರ್**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ, ಇವರ ಆತ್ಮಕ್ಕೆ ಚಿರಶಾಂತಿ ಕೋರುತ್ತಾ ಇವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕುಟುಂಬ ವರ್ಗಕ್ಕೆ ನೀಡಲೆಂದು ಆ ದೇವರಲ್ಲಿ ಪ್ರಾರ್ಥಿಸುತ್ತೇವೆ.

**ಆಡಳಿತ ಮಂಡಳಿ ಸದಸ್ಯರು ಹಾಗೂ ಸರ್ವ ಸದಸ್ಯರು, ದಾವಣಗೆರೆ, ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಸೆಂಟರ್ ವಿದ್ಯಾನಗರ, ದಾವಣಗೆರೆ.**

## ಗೌರಿಹಳ್ಳಿ ಮಂಜುನಾಥ ನಿಧನ



ಹರಪನಹಳ್ಳಿ ತಾಲ್ಲೂಕಿನ ಗೌರಿಹಳ್ಳಿ ಗ್ರಾಮದ 'ಇದ್ದದ್ದು ಇದ್ದಂಗೆ' ಪತ್ರಿಕೆಯ ಸಂಪಾದಕ ಗೌರಿಹಳ್ಳಿ ಮಂಜುನಾಥ (52) ಇವರು ದಿನಾಂಕ 4.5.2024ರ ಶನಿವಾರ ನಿಧನರಾದರು. ಪತ್ನಿ, ಮೂವರು ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ಅಂದೇ ದಿನಾಂಕ 4.5. 2024ರ ಶನಿವಾರ ಮೃತರ ಸ್ವಗ್ರಾಮವಾದ ಗೌರಿಹಳ್ಳಿಯಲ್ಲಿ ನೆರವೇರಿಸಲಾಯಿತು.

## ಮಾಜಿ ಶಾಸಕ ಬಿ.ಜಿ. ಕೊಟ್ರಪ್ಪ ಅವರಿಗೆ ಪಿತೃ ವಿಯೋಗ



ದಾವಣಗೆರೆ, ಮೇ 4- ಮಾಜಿ ಶಾಸಕರಾಗಿದ್ದ ಬಿ.ಜಿ. ಕೊಟ್ರಪ್ಪ ಅವರ ಪುತ್ರ ಬಿ.ಜಿ. ಶಿವಶಂಕರ್ (65) ಅವರು ಇಂದು ಬೆಳಿಗ್ಗೆ 9.30ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ಅವರ ಹುಟ್ಟೂರಾದ ಹರಿಹರ ತಾಲ್ಲೂಕಾದ ಬಿಳಸನೂರು ಗ್ರಾಮದಲ್ಲಿ ಇಂದು ಸಂಜೆ ನಡೆಯಿತು.

# ಸಿಎಂ ಸಿದ್ದರಾಮಯ್ಯನವರು ನನಗೆ ಬೈಯ್ದರೂ ಆಶೀರ್ವಾದ ಇದ್ದಂತೆ



## ಪಕ್ಷೇತರ ಅಭ್ಯರ್ಥಿ ವಿನಯ್

ದಾವಣಗೆರೆ, ಮೇ 4- ಸಿಎಂ ಸಿದ್ದರಾಮಯ್ಯ ಬಗ್ಗೆ ನನಗೆ ಅಪಾರ ಗೌರವವಿದೆ. ನಾನು ಒಂದು ವರ್ಷದ ರಾಜಕಾರಣದಲ್ಲಿ ಇಷ್ಟು ಹೆಸರು ಮಾಡಲು ಅವರೂ ಸಹ ಪ್ರಮುಖ ಕಾರಣ. ನಾನು ಇಲ್ಲಿ ಹೋರಾಟ ಮಾಡಿದ್ದೇನೆ. ಎಐಸಿಸಿ ಮಟ್ಟದಲ್ಲಿ ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ನೀಡಿಕೆ ವಿಚಾರದಲ್ಲಿ ನನ್ನ ಹೆಸರು ಪ್ರಸ್ತಾಪವಾಗಲು ಸಿಎಂ ಅವರ ಸಹಕಾರ ಇದ್ದುದರಿಂದಲೇ ಆಗಿದ್ದು ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ.ಬಿ.ವಿನಯ್ ಕುಮಾರ್ ತಿಳಿಸಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಬೇಕೆಂದು ಸಿಎಂ ಹೇಳುವುದರಲ್ಲಿ ತಪ್ಪೇನಿಲ್ಲ. ರಾಜಕಾರಣದಲ್ಲಿ ತಂತ್ರ - ಪ್ರತಿತಂತ್ರ ಇದ್ದೇ ಇರುತ್ತದೆ. ನನ್ನ ಪ್ರಕಾರ ಅಹಿಂದ ವರ್ಗದವರು ನನಗೆ ಮತ ನೀಡಿದರೆ ನಾನು ಗೆಲ್ಲುವ ಸಾಧ್ಯತೆ ಹೆಚ್ಚಿದೆ. ವಿನಯ್ ಕುಮಾರ್ ಒಂದು ವೇಳೆ ಗೆದ್ದರೂ ಪ್ರಧಾನಿ ನರೇಂದ್ರ ಮೋದಿ ಅವರ ಬಳಿ ಏನೂ ಕೆಲಸ ಮಾಡಿಸಿಕೊಳ್ಳಲು ಆಗುವುದಿಲ್ಲ ಎಂದೂ ಹೇಳಿದ್ದಾರೆ. ಇದು ನನಗೆ ಆಶೀರ್ವಾದವೆಂದು ನಾನು ಭಾವಿಸುತ್ತೇನೆ ಎಂದು ತಿಳಿಸಿದರು.

ನಾನು ಮೋದಿ ಅವರ ಬಳಿ ಕೆಲಸ ಕೇಳಲು ಹೋಗಲ್ಲ. ಸಂಸದನಾದರೆ ಅವರ ಬಳಿಯೇ ಅನುದಾನ ಕೇಳಬೇಕು ಎಂದೇನಿಲ್ಲ. ನಾನು ಈಗಲೂ ಕಾಂಗ್ರೆಸ್‌ನಲ್ಲಿಯೇ ಇದ್ದೇನೆ. ನಾಲ್ಕು ದಿನಗಳು ಆದ ಬಳಿಕ ನನ್ನನ್ನು ಕ್ಷಮಿಸುತ್ತಾರೆ ಎಂಬ ಭಾವನೆಯಲ್ಲಿಯೇ ಮುಂದುವರೆಯುತ್ತಿದ್ದೇನೆ. ಆದರೆ, ಯಾವುದೇ ಸರ್ಕಾರ ಇರಲೀ, ಬರಲೀ ಕೇಂದ್ರ ಸರ್ಕಾರದ ಅನುದಾನ ತಂದು ಹೇಗೆ ಅಭಿವೃದ್ಧಿ ಕೆಲಸ ಮಾಡಬೇಕು ಎಂಬುದು ನನಗೆ ಗೊತ್ತು. ನನಗೆ ಮತ ಹಾಕಿದರೆ ಬಿಜೆಪಿಗೆ ಮತ ಹಾಕಿದಂತೆ ಆಗುವುದಿಲ್ಲ ಎಂದು ಹೇಳಿದರು.

ದಾವಣಗೆರೆ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಪಕ್ಷದಿಂದ ಸ್ಪರ್ಧಿಸಿ, ಸೋತ ಅಭ್ಯರ್ಥಿಗಳಲ್ಲಿ ಅಸಮಾಧಾನ ಇದೆ. ಪಂಚಮಸಾಲಿ ಸಮಾಜಕ್ಕೆ ಮೀಸಲಾತಿ ದೊರೆತಿಲ್ಲ. ನನ್ನ ಜನಪ್ರಿಯತೆ, ಕಾರ್ಯವೈಖರಿ ಸೇರಿದಂತೆ ಕಡಿಮೆ ಅವಧಿಯಲ್ಲಿ ಜನರ ಮನ ಗೆದ್ದಿರುವುದರಿಂದ ಪಂಚಮಸಾಲಿ ಸಮಾಜವು ನನಗೆ ಬೆಂಬಲ ನೀಡುತ್ತಿದೆ. ಕಳೆದ ಬಾರಿ ಯಾವುದೇ ಆಯ್ಕೆ ಇರಲಿಲ್ಲ. ಈ ಬಾರಿ ನಾನು ಸ್ಪರ್ಧೆ ಮಾಡಿರುವುದರಿಂದ ಈ ಸಮಾಜಕ್ಕೂ ಆಯ್ಕೆ ಇದೆ. ಹಾಗಾಗಿ, ನಾನು ಹೋದ ಕಡೆಗಳಲ್ಲಿ ನನ್ನನ್ನು ಬೆಂಬಲಿಸುವುದಾಗಿ ಭರವಸೆ ಸಿಗುತ್ತಿದೆ. ಮೋದಿ ಅವರ ಮುಖ ನೋಡಿ ಬಿಜೆಪಿಗೆ ಮತ ಹಾಕುತ್ತಿದ್ದೆವು. ಈ ಬಾರಿ ನೀವು ಸ್ಪರ್ಧೆ ಮಾಡಿರುವುದರಿಂದ ನಿಮ್ಮನ್ನು ಬೆಂಬಲಿಸುತ್ತೇವೆ ಎಂದಿದ್ದಾರೆ. ಎಲ್ಲಾ ಸಮುದಾಯದವರ ಅಭಿಪ್ರಾಯವೂ ಇದೇ ಆಗಿದೆ ಎಂದು ತಿಳಿಸಿದರು.

ಕಾಗಿನೆಲೆ ಶ್ರೀಗಳು ಹಾಗೂ ಸಿದ್ದರಾಮಯ್ಯ ಅವರು ನಾಮಪತ್ರ ವಾಪಸ್ ಪಡೆಯುವಂತೆ ಹೇಳಿದ್ದು ನಿಜ. ನಾನು ಅಲ್ಲಗೆಳೆಯುವುದಿಲ್ಲ. ಎರಡು ದಿನ ಕಾಲಾವಕಾಶ ಬೇಕು ಎಂದು ಹೇಳಿದ್ದೆ. ಸಿಎಂ ಸಿದ್ದರಾಮಯ್ಯರ ಮುಂದೆ ದಿಢೀರನೇ ನಿರ್ಧಾರ ಹೇಳಲು ಆಗದು ಎಂಬುದು ನನಗೆ ಗೊತ್ತಿತ್ತು. ಆದರೆ, ಸಿಎಂ ಅವರನ್ನು ಭೇಟಿ ಮಾಡಿದ ಬಳಿಕ ಬೇರೆಯದ್ದೇ ಬೆಳವಣಿಗೆ ಆಗಿತ್ತು. ಇದು ಎಲ್ಲರಿಗೂ ಗೊತ್ತು ಎಂದರು.

ನನ್ನ ಮೊಬೈಲ್ ಕಾಲ್ ರೆಕಾರ್ಡ್ ತೆಗೆಸಿ ನೋಡಲಿ. ನಾನು ಶಾಸಕ ಭೈರತಿ ಬಸವರಾಜ್, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪರ ಜೊತೆ ಮಾತುಕತೆ ನಡೆಸಿಲ್ಲ. ಅವರ ಬೆಂಬಲಿಗರ ಜೊತೆ ಚರ್ಚೆ ನಡೆಸಿಲ್ಲ. ಆರು ವರ್ಷಗಳ ಹಿಂದೆ ಭೈರತಿ ಬಸವರಾಜ್ ಅವರನ್ನು ಭೇಟಿ ಮಾಡಿದ್ದೆ. ಆಗ ನನಗೆ ರಾಜಕೀಯದ ಗಂಧ ಗಾಳಿಯೂ ಗೊತ್ತಿರಲಿಲ್ಲ. ಐಎಎಸ್ ಕೋಚಿಂಗ್ ಸೆಂಟರ್ ಆರಂಭಿಸುವ ಮುನ್ನ ಭೇಟಿ ಮಾಡಿದ್ದೆ. ಆ ಬಳಿಕ ಅವರನ್ನು ನಾನು ಭೇಟಿ ಮಾಡಿಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

# ಹೊನ್ನಾಳಿಗಿಂದು ಮಾಜಿ ಸಚಿವ ಭೈರತಿ ಬಸವರಾಜ್



ಹೊನ್ನಾಳಿ, ಮೇ 4 - ಹಿಂದುಳಿದ ಸಮುದಾಯಗಳು ಯಾವುದೇ ರಾಜಕೀಯ ಪಕ್ಷಕ್ಕೆ ಸೀಮಿತವಾಗಿಲ್ಲ. ಆದರೆ ಕೆಲವೊಂದು ರಾಜಕೀಯ ಪಕ್ಷಗಳು ನಮ್ಮಲ್ಲಿ ಹಿಂದುಳಿದ ವರ್ಗದವರು ಇದ್ದಾರೆ ಎಂದು ಬಿಂಬಿಸುತ್ತಿದ್ದಾರೆಂದು ಬಿಜೆಪಿಯ ಹಿಂದುಳಿದ ವರ್ಗಗಳ ರಾಜ್ಯ ಉಪಾಧ್ಯಕ್ಷ ಕುಬೇಂದ್ರಪ್ಪ ಹೇಳಿದರು.

ಇಲ್ಲಿನ ಬಿಜೆಪಿ ಚುನಾವಣಾ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಸಚಿವ ಭೈರತಿ ಬಸವರಾಜ್ ಅವರು ನಾಳೆ ದಿನಾಂಕ 5ರ ಭಾನುವಾರ ಮಧ್ಯಾಹ್ನ 12ಕ್ಕೆ ಚುನಾವಣಾ ಕಚೇರಿಗೆ ಭೇಟಿ ನೀಡಲಿದ್ದು, ನಂತರದಲ್ಲಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪರ ಮತಯಾಚನೆ ಮಾಡಲಿದ್ದಾರೆ ಎಂದು ಹೇಳಿದರು.

ತಾಲ್ಲೂಕು ಬಿಜೆಪಿ ಮಂಡಲದ ಅಧ್ಯಕ್ಷ ಜೆ.ಕೆ. ಸುರೇಶ್ ಮಾತನಾಡಿ, ಎಂ.ಪಿ.ರೇಣುಕಾಚಾರ್ಯ ಅವರ ನೇತೃತ್ವದಲ್ಲಿ ಮಾಜಿ ಸಚಿವ ಭೈರತಿ ಬಸವರಾಜ್ ಹಾಗೂ ಬಿಜೆಪಿಯ ಶಾಸಕರು ಅಭ್ಯರ್ಥಿ ಪರ ಮತಯಾಚನೆ ಮಾಡಲಿದ್ದಾರೆ ಎಂದು ತಿಳಿಸಿದರು.

ತಾಲ್ಲೂಕು ಪ್ರಧಾನ ಕಾರ್ಯದರ್ಶಿ ಶಿವಾನಂದ, ಮಂಜುನಾಥ ನೆಲಹೊನ್ನೆ, ಎಂ.ಎಸ್. ಪಾಲಾಕ್ಷಪ್ಪ, ದಿಡಗೂರು ಪಾಲಾಕ್ಷಪ್ಪ, ಹತ್ತೂರು ಹನುಮಂತಪ್ಪ, ಎಸ್. ಎಸ್. ಬೀರಪ್ಪ, ಅರಬಗಟ್ಟೆ ಕರಿಬಸಪ್ಪ, ಸರಳಿನಮನೆ ಮಂಜು, ಬೆನಕನಹಳ್ಳಿ ಶ್ರೀನಿವಾಸ್ ಮತ್ತು ಇತರರು ಸುದ್ದಿಗೋಷ್ಠಿಯಲ್ಲಿದ್ದರು.

## ನಾನು ಬೇಕೋ ? ವಿನಯ್ ಬೇಕೋ ? ಎಂದ ಸಿಎಂ ಸಿದ್ದರಾಮಯ್ಯ

# ಪಕ್ಷೇತರ ಅಭ್ಯರ್ಥಿಗೆ ಒಂದೂ ಮತ ಹಾಕದಂತೆ ಸಿಎಂ ಕರೆ




ದಾವಣಗೆರೆ, ಮೇ 4 - ಪಕ್ಷೇತರ ಅಭ್ಯರ್ಥಿ ಜಿ.ಬಿ. ವಿನಯ್ ಕುಮಾರ್ ಚುನಾವಣಾ ಕಣಕ್ಕೆ ಇಳಿದಿರುವುದರ ಹಿಂದೆ, ಬಿಜೆಪಿಯ ಕುಮ್ಮಕ್ಕಿದೆ. ವಿನಯ್‌ಗೆ ಮತ ನೀಡಿದರೆ ಬಿಜೆಪಿಗೆ ಮತ ಕೊಟ್ಟಂತೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಪರ ಇಂದು ಆಯೋಜಿಸಲಾಗಿದ್ದ ಕುರುಬ ಸಮಾಜದ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದರೆ ಬಿಜೆಪಿಗೆ ನೆರವು ಮಾಡಿದಂತಾಗುತ್ತದೆ ಎಂದು ನಾನು ಹೇಳಿದ್ದೆ. ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದ ಸ್ವಾಮೀಜಿ ಸಹ ಪಕ್ಷೇತರರಾಗಿ ಸ್ಪರ್ಧಿಸದಂತೆ ತಿಳಿಸಿದ್ದರು. ಇದಕ್ಕೆ ಮೊದಲು ಒಪ್ಪಿದ್ದ ವಿನಯ್, ತನಗೆ ಏನಾದರೂ ಸಹಾಯ ಮಾಡುವಂತೆ ಕೇಳಿದ್ದರು. ಇದಕ್ಕೆ ಸಮ್ಮತಿಸಿದ್ದೆವು ಎಂದು ಸಿದ್ದರಾಮಯ್ಯ ಹೇಳಿದರು.

ಆದರೆ, ನಂತರ ಮತ್ತೆ ಚುನಾವಣಾ ಕಣಕ್ಕೆ ಧುಮುಕಿದ್ದರ ಹಿಂದೆ ಯಾರ ಕುಮ್ಮಕ್ಕಿದೆ? ವಿನಯ್ ಕುಮಾರ್‌ಗೆ ಮತ ಹಾಕಿದರೆ, ಬಿಜೆಪಿಗೆ ಲಾಭವಾಗುತ್ತದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ನಾನು ಹಾಗೂ ಹೆಚ್.ಎಂ. ರೇವಣ್ಣ, ನಂದಿಗಾವಿ ಶ್ರೀನಿವಾಸ್ ಸೇರಿದಂತೆ ಹಲವರು ಗಿಳಿ ಪಾಠ ಹೇಳಿದಂತೆ ಮನವೊಲಿಸಲು ಪ್ರತ್ನಿಸಿದ್ದೆವು. ಪಕ್ಷದಿಂದ ಏನಾದರೂ ಕೆಲಸ ಮಾಡಿಕೊಡುತ್ತೇವೆ ಎಂದರೂ ಕೇಳಲಿಲ್ಲ. ನನ್ನ ಹಾಗೂ ಸಮಾಜದ ಸ್ವಾಮೀಜಿ ಮಾತು ಕೇಳದವರನ್ನು ಬೆಂಬಲಿಸುತ್ತೀರಾ? ನನ್ನ ಬಗ್ಗೆ ಪ್ರೀತಿ, ಗೌರವ ಹಾಗೂ ಅಭಿಮಾನ ಇದ್ದರೆ ವಿನಯ್‌ಗೆ ಮತ ನೀಡಬೇಡಿ ಸಿದ್ದರಾಮಯ್ಯ ಹೇಳಿದರು.

ಮಾಜಿ ಸಚಿವ ಭೈರತಿ ಬಸವರಾಜ್ ನನಗೆ ಚೂರಿ ಹಾಕಿ ಬಿಜೆಪಿಗೆ ಪಕ್ಷಾಂತರ ಮಾಡಿದ್ದರು. ಈಗ ಭೈರತಿ ಕದ್ದು ಮುಚ್ಚಿ ವಿನಯ್ ಕುಮಾರ್ ಮನೆಗೆ ಹೋಗಿದ್ದರಂತೆ. ವ್ಯವಹಾರ ಕುದುರಿಸಲು ಹೋಗಿದ್ದರಾ? ಎಂದು ಪ್ರಶ್ನಿಸಿದರು.

ನಾನು ಬೇಕೋ? ವಿನಯ್ ಕುಮಾರ್ ಬೇಕೋ? ನಾನು ಬೇಕು ಎನ್ನುವುದಾದರೆ ವಿನಯ್ ಕುಮಾರ್‌ಗೆ ಒಂದು ಮತವನ್ನೂ ಹಾಕಬಾರದು ಎಂದವರು ಕರೆ ನೀಡಿದರು.

ನಾನು ಇರುವವರೆಗೂ ಹಿಂದುಳಿದರಿಗೆ ನಾಯಕತ್ವ ಕೊಡಿಸುವ ಪ್ರಯತ್ನ ಮಾಡುತ್ತೇನೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಲೋಕಸಭೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಸ್ಥಾನ ದೊರೆತರೆ, ನನಗೇ ಹೆಸರು ಬರುತ್ತದೆ. ನಾನೇ ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಅಭ್ಯರ್ಥಿ ಎಂದು ಭಾವಿಸಿ, ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮತ ನೀಡಬೇಕು ಎಂದು ಹೇಳಿದರು.

ಬಿಜೆಪಿ ಕಳೆದ ಹಾಗೂ ಈಗಿನ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಕುರುಬ ಸಮಾಜದ ಯಾರಿಗೂ ಟಿಕೆಟ್ ನೀಡಿಲ್ಲ. ನನ್ನ ಮೇಲೆ ಎಗರಿ ಬೀಳುತ್ತಿದ್ದ ಕೆ. ಎಸ್. ಈಶ್ವರಪ್ಪ ಅವರ ಮಗನಿಗೂ ಟಿಕೆಟ್ ಕೊಟ್ಟಿಲ್ಲ. ಆದರೆ, ಕಾಂಗ್ರೆಸ್ ಕಳೆದ ಬಾರಿ ಮೂವರು ಹಾಗೂ ಈ ಬಾರಿ ಇಬ್ಬರು ಕುರುಬರಿಗೆ ಟಿಕೆಟ್ ನೀಡಿದೆ ಎಂದೂ ಸಿದ್ದರಾಮಯ್ಯ ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ. ರೇವಣ್ಣ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲಾ ಸಾಮಾಜಿಕ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ. ಸಿದ್ದರಾಮಯ್ಯ ಅವರು ಕಳೆದ ಅವಧಿಯಲ್ಲಿ ಭಾಗ್ಯ ಯೋಜನೆಗಳನ್ನು ಜಾರಿಗೆ ತಂದು ಭಾಗ್ಯರಾಜ ಆಗಿದ್ದರು. ಈ ಬಾರಿ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದಾರೆ ಎಂದರು.

ವೇದಿಕೆಯ ಮೇಲೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್, ಶಾಸಕ ಬಿ. ದೇವೇಂದ್ರಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್. ಬಿ. ಮಂಜಪ್ಪ, ಮಾಜಿ ಶಾಸಕ ಶಂಕರ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಶಿವಕುಮಾರ್ ಒಡೆಯರ್, ಸೈಯದ್ ಸೈಫುಲ್ಲಾ, ಸಮರ್ಥ ಮಲ್ಲಿಕಾರ್ಜುನ್, ಲೋಕಿಕೆರೆ ಸಿದ್ದಪ್ಪ ಮತ್ತಿತರರು ಉಪಸ್ಥಿತರಿದ್ದರು.

### ವಿನಯ್‌ಗೆ ಮತ ನೀಡಿದರೆ ಏನು ಪ್ರಯೋಜನ ?

ರಾಜ್ಯದಲ್ಲಿ ಕಾಂಗ್ರೆಸ್‌ಗೆ ಮತ ನೀಡಿದ್ದರಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಕೇಂದ್ರದಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಹಿಳೆಯರಿಗೆ ವರ್ಷಕ್ಕೆ ಒಂದು ಲಕ್ಷ ರೂ. ದೊರೆಯಲಿದೆ. ವಿನಯ್ ಕುಮಾರ್‌ಗೆ ಮತ ನೀಡಿದರೆ ಏನು ಪ್ರಯೋಜನ? ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು.

ಜಾತಿ ಎಂದು ಹೇಳಿದ ತಕ್ಷಣ ಮತ ಕೊಟ್ಟು ಬಿಡಬೇಕೇ? ನಮ್ಮ ಜಾತಿಯಲ್ಲಿ ಹುಟ್ಟಿದ್ದಾರೆ ಎಂದರೆ ಮತ ಕೊಡಬಹುದೇ? ಕೇವಲ ಒಂದು ಜಾತಿಯವರಿಂದ ಚುನಾವಣೆ ಗೆಲ್ಲಲಾಗದು ಎಂದೂ ಅವರು ಹೇಳಿದರು.

# ಪ್ರಜ್ವಲ್ ಪ್ರಕರಣ : ಹೆಣ್ಣು ಮಕ್ಕಳ ರಕ್ಷಣೆ, ಆರೋಪಿಗಳಿಗೆ ಶಿಕ್ಷೆ

## ಸಿದ್ದರಾಮಯ್ಯಗೆ ಕಾಂಗ್ರೆಸ್ ನಾಯಕ ರಾಹುಲ್ ಸೂಚನೆ

ಬೆಂಗಳೂರು, ಮೇ 4 - ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿರುವ ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಿ ಹಾಗೂ ಆರೋಪಿಗಳಿಗೆ ಕಠಿಣ ಶಿಕ್ಷೆ ಕೊಡಿಸುವಲ್ಲಿ ಕ್ರಮ ಕೈಗೊಳ್ಳಿ ಎಂದು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೂಚಿಸಿದ್ದಾರೆ.

ಈ ಸಂಬಂಧ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿರುವ ಅವರು, ಕಳೆದ ಡಿಸೆಂಬರ್ 2023ರಲ್ಲೇ ದೇವರಾಜೇಗೌಡ ಎಂಬುವವರು ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಗಮನಕ್ಕೆ ಪ್ರಜ್ವಲ್ ರೇವಣ್ಣ ಕುರಿತ ಪ್ರಕರಣವನ್ನು ಗಮನಕ್ಕೆ ತಂದಿದ್ದರೂ, ಕೇಂದ್ರದ ಉನ್ನತ ನಾಯಕರು ಆರೋಪಿ ಪರ ಚುನಾವಣಾ ಪ್ರಚಾರ ಕೈಗೊಂಡಿರುವುದು ಸೋಜಿಗದ ಸಂಗತಿಯಾಗಿದೆ ಎಂದಿದ್ದಾರೆ.

ಪ್ರಕರಣದ ತನಿಖೆಯ ದಿಕ್ಕು ತಪ್ಪಿಸಲು ಕೇಂದ್ರ ಸರ್ಕಾರ ಉದ್ದೇಶ ಪೂರ್ವಕವಾಗಿ ಆರೋಪಿ ದೇಶ ಬಿಟ್ಟು ಓಡಿಹೋಗುವಂತೆ ಅವಕಾಶ ಮಾಡಿಕೊಟ್ಟಿದೆ.



ಮಹಿಳೆಯರ ಮೇಲಿನ ತೀವ್ರ ತೆರನಾದ ದೌರ್ಜನ್ಯ ಪ್ರಕರಣದ ಬಗ್ಗೆ ಇಷ್ಟೊಂದು ನಿರ್ಲಕ್ಷ್ಯ ತೋರಿದ್ದನ್ನು ತಮ್ಮ ಎರಡು ದಶಕಗಳ ರಾಜಕೀಯ ಜೀವನದಲ್ಲಿ ಕಂಡಿಲ್ಲ ಎಂದೂ ಹೇಳಿದ್ದಾರೆ. ಇಂತಹ ಸನ್ನಿವೇಶದಲ್ಲಿ ಶೋಷಣೆಗೆ ಒಳಗಾದ ನಮ್ಮ ತಾಯಂದಿರು ಮತ್ತು ಸಹೋದರಿಯರ ನ್ಯಾಯಕ್ಕಾಗಿ ಹೋರಾಟ ಮಾಡುವುದು ಕಾಂಗ್ರೆಸ್ ಪಕ್ಷದ ನೈತಿಕ ಹೊಣೆಗಾರಿಕೆಯಾಗಿದೆ. ಘಟನೆ ಸಂಬಂಧ ಸೂಕ್ತ ಕ್ರಮಗಳನ್ನು ಕೈಗೊಳ್ಳಿ ಎಂದು ರಾಹುಲ್ ಗಾಂಧಿ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ

# ಸ್ಟಾರ್ ಪ್ರಚಾರಕರು ಬಂದರೂ ಗೆಲುವು ನನ್ನದೇ



ದಾವಣಗೆರೆ, ಮೇ 4 - ಬಿಜೆಪಿ ಮತ್ತು ಕಾಂಗ್ರೆಸ್ ಅಭ್ಯರ್ಥಿಗಳ ಪರ ಸ್ಟಾರ್ ಪ್ರಚಾರಕರು ಬಂದರೂ, ಸ್ವಾಭಿಮಾನಿಗಳಾದ ದಾವಣಗೆರೆ ಜನರು ನನ್ನನ್ನು ಗೆಲ್ಲಿಸುತ್ತಾರೆ ಎಂಬ ವಿಶ್ವಾಸ ಇದೆ ಎಂದು ಲೋಕಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಜಿ. ಬಿ. ವಿನಯ್ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಮಾಧ್ಯಮದವರ ಜೊತೆ ಮಾತನಾಡಿದ ಅವರು, ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ಪರ ರಾಷ್ಟ್ರ ಹಾಗೂ ರಾಜ್ಯಮಟ್ಟದ ನಾಯಕರು ಪ್ರಚಾರಕ್ಕೆ ಬರುತ್ತಿದ್ದಾರೆ. ಆದರೆ, ನನಗೆ ಜನರೇ ಸ್ಟಾರ್ ಪ್ರಚಾರಕರು. ಸೆಲೆಬ್ರಿಟಿಗಳು, ರಾಜಕಾರಣಿಗಳು ಬಂದು ಭಾಷಣ ಮಾಡಿದರೆ ಮತಗಳು ಅವರಿಗೆ ಹೋಗುವುದಿಲ್ಲ. ಜಿಲ್ಲೆಯ ಜನತೆ ಬದಲಾವಣೆ ಬಯಸಿದ್ದು, ಈ ಚುನಾವಣೆಯಲ್ಲಿ ಸಾಧ್ಯವಾಗುತ್ತದೆ ಎಂದರು.

ಶಾಸಕ ಪ್ರದೀಪ್ ಈಶ್ವರ್ ಅವರು ಕಾಂಗ್ರೆಸ್ ಪರ ಪ್ರಜಾಪ್ರಭುತ್ವದಡಿ ಬಂದು ಪ್ರಚಾರ ಮಾಡಿದ್ದಾರೆ. ಎಷ್ಟೇ ಪ್ರಚಾರಕರು ಬಂದರೂ ಸಂತೋಷ. ಯಾರೇ ಸೆಲೆಬ್ರಿಟಿ ಗಳು ಬಂದರೂ ನೋಡಲು ಜನರು ಬರು ತ್ತಾರೆ. ಅಭಿಮಾನಿಗಳು ಪ್ರದೀಪ್ ಈಶ್ವರ್‌ಗೆ ಸಾಕಷ್ಟು ಸಂಖ್ಯೆಯಲ್ಲಿದ್ದು, ಇದು ಮತಗಳಾಗಿ ಪರಿವರ್ತನೆ ಆಗುವುದಿಲ್ಲ ಎಂದು ತಿಳಿಸಿದರು.

# 14 ಲೋಕಸಭಾ ಕ್ಷೇತ್ರಗಳ ಬಹಿರಂಗ ಪ್ರಚಾರಕ್ಕೆ ಇಂದು ತೆರೆ

ಬೆಂಗಳೂರು, ಮೇ 4 - ಮಾಜಿ ಮುಖ್ಯಮಂತ್ರಿಗಳೂ ಸೇರಿದಂತೆ ಘಟಾನುಘಟಿಗಳು ಕಣದಲ್ಲಿರುವ ಉತ್ತರ ಕರ್ನಾಟಕ ಭಾಗದ 14 ಲೋಕಸಭಾ ಕ್ಷೇತ್ರಗಳ ಬಹಿರಂಗ ಪ್ರಚಾರಕ್ಕೆ ಭಾನುವಾರ ಸಂಜೆ ತೆರೆ ಬೀಳಲಿದೆ.

ದಾವಣಗೆರೆ, ಶಿವಮೊಗ್ಗ, ಹಾವೇರಿ, ಉತ್ತರ ಕನ್ನಡ, ಬೆಳಗಾವಿ, ಚಿಕ್ಕೋಡಿ, ವಿಜಾಪುರ, ಬಾಗಲಕೋಟೆ, ಬೀದರ್, ಗುಲ್ಬರ್ಗ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ಧಾರವಾಡ ಲೋಕಸಭಾ ಕ್ಷೇತ್ರಗಳಿಗೆ ಮೇ 7ರಂದು ಮತದಾನ ನಡೆಯಲಿದೆ.

ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳಿಗೆ ಕಳೆದ ಏಪ್ರಿಲ್ 26ರಂದು ಮೊದಲ ಹಂತದಲ್ಲಿ ಮತದಾನ ನಡೆದಿದ್ದು, ಉತ್ತರ ಕರ್ನಾಟಕ ಭಾಗದ ಕ್ಷೇತ್ರಗಳಿಗೆ ಎರಡನೇ ಹಂತದಲ್ಲಿ ಮತದಾನ ಜರುಗಲಿದೆ.

ಬಹಿರಂಗ ಪ್ರಚಾರಕ್ಕೆ ತೆರೆ ಬೀಳುವ ಸಮಯ ಸಮೀಪಿಸುತ್ತಿದ್ದಂತೆ, ಬಿಜೆಪಿ ಹಾಗೂ ಕಾಂಗ್ರೆಸ್ ನಾಯಕರು ತಮ್ಮ ಪಕ್ಷದ ಅಭ್ಯರ್ಥಿಗಳ ಪರ ಬಿರುಸಿನ ಪ್ರಚಾರ ನಡೆಸಿದ್ದಾರೆ.

ದಾವಣಗೆರೆ, ಶಿವಮೊಗ್ಗ ಹೊರತುಪಡಿಸಿ ಉಳಿದ 12 ಕ್ಷೇತ್ರಗಳಲ್ಲೂ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದ್ದು, ಉಳಿದ ಎರಡು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಬಂಡಾಯ ಎದ್ದಿರುವ ಅಭ್ಯರ್ಥಿಗಳು ಪ್ರಬಲ ಪೈಪೋಟಿ ಕೊಡುತ್ತಿದ್ದಾರೆ.

ತಮ್ಮ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಕಾಲ ಚುನಾವಣಾ ಪ್ರಚಾರ ಕೈಗೊಂಡರೆ, ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಬಿಜೆಪಿ ರಾಷ್ಟ್ರಾಧ್ಯಕ್ಷ ಜೆ.ಪಿ. ನಡ್ಡ ಎರಡು ದಿನಗಳ ಕಾಲ ಬಹಿರಂಗ ಸಭೆ ಮತ್ತು ರೋಡ್ ಶೋಗಳನ್ನು ನಡೆಸಿದ್ದಾರೆ. ಇವರ ಜೊತೆ ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಪ್ರಚಾರ ಕೈಗೊಂಡಿದ್ದರೆ, ಕಾಂಗ್ರೆಸ್‌ನ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಹಿರಿಯ ನಾಯಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕ ಗಾಂಧಿ ಎರಡು-ಮೂರು ಬಾರಿ ಬಿರುಸಿನ ಪ್ರಚಾರ ಕೈಗೊಂಡಿದ್ದರು.

ಮೊದಲ ಹಂತದ ಚುನಾವಣೆ ಮುಗಿಯುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಕ್ಷದ ಅಭ್ಯರ್ಥಿಗಳನ್ನು ದೊಡ್ಡ ಪ್ರಮಾಣದಲ್ಲಿ ಗೆಲ್ಲಿಸಿಕೊಂಡು ತಮ್ಮ ಶಕ್ತಿ ಹೆಚ್ಚಿಸಿಕೊಳ್ಳಲು ಬಿಡುವಿಲ್ಲದಂತೆ ಈ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿದ್ದಾರೆ.

ಮೇ 7ರಂದು ನಡೆಯುವ ಮತದಾನಕ್ಕೆ ಕೇಂದ್ರ ಚುನಾವಣಾ ಆಯೋಗ ಈಗಾಗಲೇ ಸಕಲ ಸಿದ್ಧತೆ ಮಾಡಿಕೊಂಡಿದೆ.

# ದುರ್ಬಲರು ಪ್ರಧಾನಿಯಾದರೆ ದೇಶವನ್ನು ಕಾಪಾಡುವವರು ಯಾರು ?

## ಉತ್ತರ ವಿಧಾನಸಭಾ ಕ್ಷೇತ್ರದ ಪ್ರಚಾರದಲ್ಲಿ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಪ್ರಶ್ನೆ



ದಾವಣಗೆರೆ, ಮೇ 4- ರಾಹುಲ್ ಗಾಂಧಿಯಂತಹ ದುರ್ಬಲರು ಪ್ರಧಾನಿಯಾದರೆ ಈ ದೇಶವನ್ನು ಯಾರು ಕಾಪಾಡುತ್ತಾರೆ. ಈ ಬಗ್ಗೆ ಪ್ರಜ್ಞಾವಂತರು ಯೋಚಿಸಿ, ಮತ ಹಾಕಬೇಕು ಎಂದು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಮನವಿ ಮಾಡಿದರು.

ರಾಷ್ಟ್ರೀಯತೆ, ಅಭಿವೃದ್ಧಿ ಹೆಸರಿನಲ್ಲಿ ಬಿಜೆಪಿ ಮತಯಾಚನೆ ಮಾಡುತ್ತಿದೆ. ಆದರೆ ಭಾರತದ ಅಭಿವೃದ್ಧಿ ಸಹಿಸದೇ ಇರುವ ಪಾಕಿಸ್ತಾನ ರಾಹುಲ್ ಗಾಂಧಿ ಪ್ರಧಾನಿ ಆಗಲಿ ಎಂದು ಬಯಸುತ್ತಿದೆ ಇದರ ಅರ್ಥ ಏನು ? ಎಂದು ಅವರು ಪ್ರಶ್ನಿಸಿದರು.

ಉತ್ತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಶಾಮನೂರು, 33, 34, 36 ನೇ ವಾರ್ಡ್, ತರಳುಬಾಳು, ವಿನಾಯಕ ಬಡಾವಣೆಯಲ್ಲಿ ಮತ ಯಾಚಿಸಿ ಮಾತನಾಡಿದ ಅವರು ಮತ ಯಾಚನೆ ಮಾಡುವ ಸಂದರ್ಭದಲ್ಲಿ ಮತದಾರರನ್ನು ಉದ್ದೇಶಿಸಿ ಅವರು ಮಾತನಾಡಿದರು.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದು ಅಧಿಕಾರಕ್ಕೆ ಬರುವುದು ಗ್ಯಾರಂಟಿ. ಜೂನ್ 4ರ ನಂತರ ದೇಶದಲ್ಲಿ ಕಾಂಗ್ರೆಸ್ ಧೂಳಿಪಟವಾಗುತ್ತದೆ. ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸಬೇಕು ಎಂದು ಜನ ಸಂಕಲ್ಪ ಮಾಡಿದ್ದಾರೆ. ನಾವು ಈಗಾಗಲೇ ಗೆದಿದ್ದೇವೆ. ಹೆಚ್ಚಿನ ಲೀಡ್‌ಗಾಗಿ ನಾವು, ನಮ್ಮ ಕಾರ್ಯಕರ್ತರು ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ನನ್ನ ಪತಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ನಗರಕ್ಕೆ ಕೋಟ್ಯಂತರ ರೂ. ಅನುದಾನ ತಂದು, ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಅನುದಾನ ತಂದಿದ್ದು ಜಿ.ಎಂ.ಸಿದ್ದೇಶ್ವರ. ಆದರೆ, ಎಸ್.ಎಸ್.ಮಲ್ಲಿಕಾರ್ಜುನ್ ಮತ್ತು ಅವರ ತಂದೆ ಕೆಲವೊಂದು ಕಾಮಗಾರಿಗಳಲ್ಲಿ ಹಸ್ತಕ್ಷೇಪ ಮಾಡಿ ಅವೈಜ್ಞಾನಿಕ ಕಾಮಗಾರಿ ಮಾಡಿಸಿದ್ದಾರೆ ಎಂದು ಆರೋಪಿಸಿದರು.

ಅಶೋಕ ರೈಲ್ವೆ ಗೇಟ್ ಬಳಿ ಲಭ್ಯವಿರುವ ಜಾಗ ಬಳಸಿ, ಸಣ್ಣ ವಾಹನ ಓಡಾಡಲು ಸೇತುವೆ ನಿರ್ಮಾಣ ಮಾಡಿದ್ದೇವೆ. ಮುಂದುವರೆದ ಭಾಗವಾಗಿ ಪದ್ಮಾಂಜಲಿ ಚಿತ್ರಮಂದಿರದ ಬಳಿ 2 ಬೃಹತ್ ಗಾತ್ರದ ಸೇತುವೆ ನಿರ್ಮಾಣಕ್ಕೆ 49 ಕೋಟಿ ರೂ. ಮಂಜೂರು ಮಾಡಿಸಿದ್ದೇವೆ. ಪ್ರಥಮ ಆದ್ಯತೆ ಮೇರೆಗೆ ಕಾಮಗಾರಿ ಪೂರ್ಣಗೊಳಿಸುತ್ತೇವೆ ಎಂದರು.

ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಲೋಕಿಕೆರೆ ನಾಗರಾಜ್ ಮಾತನಾಡಿ, ಸಂಸದ ಜಿ.ಎಂ.ಸಿದ್ದೇಶ್ವರ ಮಾಡಿರುವ ಅಭಿವೃದ್ಧಿ ಕೆಲಸಗಳೇ ನಮ್ಮ ಅಭ್ಯರ್ಥಿ ಗೆಲುವಿಗೆ ಶ್ರೀರಕ್ಷೆ. ದೇಶದಲ್ಲಿ ಮೋದಿ ಹವಾ ಬಿಟ್ಟರೆ ಬೇರೆಯವರ ಹವಾ ಇಲ್ಲ. ರಾಹುಲ್ ಗಾಂಧಿ ಪ್ರಚಾರಕ್ಕೆ ಹೋದ ಕಡೆಯಲ್ಲ ಬಿಜೆಪಿ ಭರ್ಜರಿ ಮತಗಳ ಅಂತರದಿಂದ ಗೆದ್ದಿದೆ. ಅದಕ್ಕಾಗಿ ಈಗ ಅವರ ಸಹೋದರಿ ಪ್ರಿಯಾಂಕಾ ಗಾಂಧಿ ಅವರನ್ನು ಪ್ರಚಾರಕ್ಕೆ ಕಳುಹಿಸುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಬಿಜೆಪಿ ಮುಖಂಡರಾದ ಸಂಕೋಳ್ ಚಂದ್ರಶೇಖರ್, ಜಿಲ್ಲಾಧ್ಯಕ್ಷ ಎನ್. ರಾಜಶೇಖರ್, ಪ್ರಧಾನ ಕಾರ್ಯದರ್ಶಿ ಬಿ. ಎಸ್.ಜಗದೀಶ್, ಗ್ಯಾರಳ್ಳಿ ಶಿವಕುಮಾರ್, ಪಾಲಿಕೆ ಸದಸ್ಯ ವೀರೇಶ್, ಚಂದ್ರಪ್ಪ, ಗೌಡರು ಚನ್ನಪ್ಪ, ಯುವರಾಜ್, ರಾಜು, ಬೂದಾಳ್ ನಿಂಗರಾಜ್, ಮಂಡಲದ ಅಧ್ಯಕ್ಷರು, ಬಿಜೆಪಿ ಮುಖಂಡರು, ಗ್ರಾಮದ ಮುಖಂಡರು, ಕಾರ್ಯಕರ್ತರು ಇದ್ದರು.

# ಹರಿಹರ : ಮತದಾನ ಬಹಿಷ್ಕರಿಸಿದ್ದ ಬಡಾವಣೆ ನಿವಾಸಿಗಳ ಮನವೊಲಿಸಿದ ಪೌರಾಯುಕ್ತರು

ಹರಿಹರ, ಮೇ 4- ಮತದಾನ ಬಹಿಷ್ಕರಿಸುವುದಾಗಿ ಪ್ರತಿಭಟನೆಯಲ್ಲಿ ತೊಡಗಿದ್ದ ನಗರದ ವಿನಾಯಕ ಬಡಾವಣೆ, ಭಾರತ್ ಆಯಿಲ್ ಮಿಲ್ ಕಾಂಪೌಂಡ್ ಹಾಗೂ ಪೌರ ಕಾರ್ಮಿಕ ಬಡಾವಣೆ ನಿವಾಸಿಗಳ ಮನ ಒಲಿಸುವಲ್ಲಿ ಪೌರಾಯುಕ್ತ ಐಗೂರು ಬಸವರಾಜ್ ಮತ್ತು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ರಾಮಕೃಷ್ಣಪ್ಪ ಯಶಸ್ವಿಯಾಗಿದ್ದಾರೆ.

ಈ ವೇಳೆ ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, ಈ ಬಡಾವಣೆಗಳ ಸುಮಾರು 1356 ಮತದಾರರು ತಮಗೆ ಮೂಲಭೂತ ಸೌಕರ್ಯಗಳ ಕೊರತೆ ಇರುವುದರಿಂದ ನಾವು ಮತದಾನ ಮಾಡದೇ ಬಹಿಷ್ಕಾರ ಮಾಡುವುದಾಗಿ ಹೇಳಿ, ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಭೇಟಿ ಕೊಟ್ಟು ನಿವಾಸಿಗಳಿಗೆ ನ್ಯಾಯವನ್ನು ಒದಗಿಸಲು ಮುಂದಾಗಬೇಕು ಎಂದು ವಿವಿಧ ಬಗೆಯ ಹೋರಾಟಕ್ಕೆ ಮುಂದಾಗಿದ್ದರು ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳು ಸಮಸ್ಯೆಯನ್ನು ಪರಿಹರಿಸಲು ನಮಗೆ ಸೂಚನೆ ನೀಡಿದ್ದರು. ಅವರ ಆದೇಶದಂತೆ ಸ್ಥಳಕ್ಕೆ ಭೇಟಿ ಕೊಟ್ಟು ಮತದಾರರ ಸಮಸ್ಯೆಗಳನ್ನು ಆಲಿಸಿ, ಚುನಾವಣೆ ಮುಗಿದ ನಂತರ ಜಿಲ್ಲೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತಂದು, ಮೂಲಭೂತ ಸೌಕರ್ಯಗಳನ್ನು ಒದಗಿಸುವ ವ್ಯವಸ್ಥೆ ಮಾಡಲಾಗುತ್ತದೆ ಎಂದು ಮನವರಿಕೆ ಮಾಡಿಕೊಟ್ಟ ಪರಿಣಾಮ, ಸ್ಥಳೀಯ ನಿವಾಸಿಗಳು ಮತದಾನ ಮಾಡುವುದಕ್ಕೆ ಒಪ್ಪಿಗೆ ಸೂಚಿಸಿದರು. ನಂತರ ಅವರಿಗೆ ಚುನಾವಣೆ ಪ್ರಮಾಣ ವಚನವನ್ನು ಬೋಧಿಸಲಾಯಿತು ಎಂದು ಹೇಳಿದರು.

ಬಡಾವಣೆ ನಿವಾಸಿ ಮೂರ್ತಿ ಮಾತನಾಡಿ, ನಮಗೆ ಯಾವುದೇ ರೀತಿಯ ರಾಜಕೀಯ ಪಕ್ಷದವರನ್ನು ಓಲೈಕೆ ಮತ್ತು ತಿರಸ್ಕರಿಸಬೇಕು ಎಂಬ ಉದ್ದೇಶದಿಂದ ಈ ರೀತಿಯ ಹೋರಾಟಕ್ಕೆ ಮುಂದಾಗಿಲ್ಲ. ಬಡಾವಣೆಯ ಜನರು ಹಲವಾರು ವರ್ಷಗಳಿಂದ ಮೂಲಭೂತ ಸೌಕರ್ಯಗಳ ಕೊರತೆಯನ್ನು ಅನುಭವಿಸುತ್ತಿರುವ ಕಾರಣ ಇಲ್ಲಿಯವರೆಗೂ ಅನೇಕ ರಾಜಕೀಯ ಪಕ್ಷಗಳ ಮುಖಂಡರ ಗಮನಕ್ಕೆ ತಂದಾಗ ಬರೀ ಭರವಸೆ ನೀಡಿದರು. ಹಾಗಾಗಿ ಅನಿವಾರ್ಯವಾಗಿ ಹೋರಾಟಕ್ಕೆ ಮುಂದಾಗುವಂತಹ ಪರಿಸ್ಥಿತಿ ನಿರ್ಮಾಣವಾಯಿತು ಎಂದರು.

ನಗರಸಭೆ ಮಾಜಿ ಸದಸ್ಯೆ ರತ್ನಮ್ಮ, ಡಿ.ಎಸ್. ಎಸ್. ಸಂಘಟನೆ ಮುಖಂಡ ಶ್ರೀನಿವಾಸ್, ಯಮನೂರು, ರಮೇಶ್, ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆಡಳಿತ ವಿ.ಎ. ಹೇಮಂತ್ ಕುಮಾರ್, ಸಮೀರ್, ಹನುಮಂತಪ್ಪ, ಅಣ್ಣಪ್ಪ, ಬಸವರಾಜ್, ಪರುಶುರಾಮ್, ರಾಜು, ಹಾಲೇಶ್, ಮಾರುತಿ, ಅಜ್ಜಪ್ಪ, ಕವಿತಾ, ನಾಗಮ್ಮ, ವಾಣಿ, ಶಾಂತಮ್ಮ, ನೀಲಮ್ಮ, ಲಕ್ಷ್ಮಿ, ಅಕ್ಕಮ್ಮ, ಗೀತಾ, ರುಕ್ಮಿಣಿ ಬಾಯಿ, ಲಲಿತಾಬಾಯಿ, ಅನ್ನಪೂರ್ಣ, ಹೊನ್ನಮ್ಮ, ಮಂಜುಳಾ, ಇತರರು ಹಾಜರಿದ್ದರು.

**ಶ್ರೀ ಸಾಯಿ ಅಭಿವೃದ್ಧಿ ಅಸೋಸಿಯೇಟ್ಸ್**

**ನೇಮಕಾತಿ ಮಾಡಿಕೊಳ್ಳುತ್ತಿದ್ದೇವೆ**

ದಾವಣಗೆರೆ ಸಿಟಿ ಹಾಗೂ ದಾವಣಗೆರೆ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮದ ಗ್ರಾಮಸ್ಥರನ್ನು ನಮ್ಮಲ್ಲಿ ಅರೆಕಾಲಿಕ / ಪೂರ್ಣ ಉದ್ಯೋಗ ಮಾಡಲು ಬಯಸುವವರನ್ನು ಈ ಕೆಳಕಂಡಂತೆ ನೇಮಕಾತಿ ಮಾಡಕೊಳ್ಳುತ್ತಿದ್ದೇವೆ.

**ಹಿರಿಯ ನಾಗರಿಕರು, ನಿವೃತ್ತ ಶಿಕ್ಷಕರು, ಪಿಂಚಣಿದಾರರು, ಪಿಗ್ಮಿ ಏಜೆಂಟರು, ಸಂಘದ ಮಹಿಳೆಯರು ಮತ್ತು ಪುರುಷರು ಎಲ್ಲಾ ಇಲಾಖೆಯ ಹಿರಿಯ ನಾಗರಿಕರು, ಗೃಹಿಣಿಯರು,**

ಗೃಹೋಪಯೋಗಿ ಉತ್ಪನ್ನಗಳ ಮಾರಾಟಗಾರರನ್ನು ಸ್ವಾಗತಿಸುತ್ತಿದ್ದೇವೆ.

**ಈ ಕೆಲಸವನ್ನು ನಿಮ್ಮ ಮನೆ ಅಥವಾ ನಿಮ್ಮ ಊರಿನಲ್ಲಿಯೇ ಮಾಡಬಹುದಾಗಿದೆ.**

**ವಿ.ಸೂ. : ನಮ್ಮಲ್ಲಿ ಸೇವೆ ಸಲ್ಲಿಸುವವರಿಗೆ ವೇತನವಿರುತ್ತದೆ.**

**ಸಂಪರ್ಕಿಸಿ : 63606 95026, 90352 60524**

**HOUSE FOR RENT / LEASE**

# 1998/70, 1st main, 15th Cross,
Taralabalu Badavane, Vidya Nagara,
**20x30, First Floor, North Facing**
**(Lucky House) Only Veg Aproved**
Bore Water Or River Water,
Car Parking Facility

**Guruprasad D.P, ಮೊ. 87470 21999**

## ಸಾರ್ವಜನಿಕ ಪ್ರಕಟಣೆ

ಈ ಕೆಳಕಂಡ ಪ್ರಕಟಣೆದಾರರು ಈ ಮುಖೇನ ಸಾರ್ವಜನಿಕ ಪ್ರಕಟಣೆ ನೀಡುವುದೇನೆಂದರೆ:

ನಾನು ದಿ.1.5.2024 ರಂದು ದಾವಣಗೆರೆಯ ಪಿ.ಜಿ ಬಡಾವಣೆಯಿಂದ ರೈಲ್ವೆ ನಿಲ್ದಾಣದ ಬಳಿ ಮೋಟಾರ್ ಸೈಕಲ್ ನಲ್ಲಿ ಹೋಗುತ್ತಿರುವಾಗ ಮೂಲ ನೋಂದಣಿ ಕ್ರಯ ಪತ್ರ ನಂಬರ್ 6270 dt.10.11.2000 ದಾಖಲೆ ಇರುವ ಕವರ್ ಜೆರಾಕ್ಸ್ ಮಾಡಿಸಲು ಹೈಸ್ಕೂಲ್ ಮೈದಾನದ ಹತ್ತಿರ ನ್ಯಾಯಾಲದ ಪಕ್ಕ ಇರುವ ಜೆರಾಕ್ಸ್ ಅಂಗಡಿಗೆ ಹೋಗಿ ಜೆರಾಕ್ಸ್ ಮಾಡಿಸಿಕೊಂಡು ವಾಪಾಸ್ ಬರುವಾಗ ರೈಲ್ವೆ ನಿಲ್ದಾಣದ ಬಳಿ ಕೈ ಜಾರಿ ಕೆಳಗೆ ಬಿದ್ದಿತು.

ಸ್ವಲ್ಪ ಮುಂದೆ ಹೋದಾಗ ಆ ಕವರ್ ಬಿದ್ದಿರುವುದು ಗೊತ್ತಾಗಿ ನಾನು ಬಂದ ಮಾರ್ಗದಲ್ಲಿಯೇ ಕೂಡಲೇ ಹಿಂದಿರುಗುವಷ್ಟರಲ್ಲಿ ಸದರಿ ಕವರ್ ಸಿಕ್ಕಿತು, ಆದರೆ ಆ ಕವರ್‌ನಲ್ಲಿದ್ದ ಮೂಲ ನೋಂದಣಿ ಕ್ರಯ ಪತ್ರ ನಂಬರ್ 6270 dt.10.11.2000 ಕಳೆದಿರುತ್ತದೆ. ಆದರೆ ಅದರೊಂದಿಗೆ ಇತರೆ ರೆವೆನ್ಯೂ ದಾಖಲೆಗಳು ಹಾಗೆಯೇ ಇದ್ದವು. ಆದ ಕಾರಣ ಸದರಿ ಮೂಲ ನೋಂದಣಿ ಕ್ರಯ ಪತ್ರ ನಂಬರ್ 6270 dt.10.11.2000 ದಾಖಲೆ ಯಾರಿಗಾದರೂ ದೊರೆತಲ್ಲಿ ಕೂಡಲೇ ಈ ಕೆಳಕಂಡ ಪ್ರಕಟಣೆದಾರರ ವಿಳಾಸಕ್ಕೆ ಸಂಪರ್ಕಿಸಬೇಕೆಂದು, ಸದರಿ ಪ್ರಕಟಣೆದಾರರು ತಮ್ಮ ಮೇಲೆ ಯಾವುದೇ ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲು ಮಾಡಿಲ್ಲ ಹಾಗೂ ತಮ್ಮ ಮೇಲೆ ಪ್ರಕಟಣೆದಾರರು ಯಾವುದೇ ರೀತಿಯ ಕಾನೂನಿನ ಕ್ರಮ ಕೈಗೊಳ್ಳುವುದಿಲ್ಲವೆಂದು ತಿಳಿಸಲಾಗಿದೆ.

**ಷೆಡ್ಯೂಲ್** : ದಾವಣಗೆರೆ ಸಬ್-ರಿಜಿಸ್ಟ್ರಾರ್‌ವರ ಕಛೇರಿ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ತಾಲ್ಲೂಕು, ಮಾಯಕೊಂಡ ಹೋಬಳಿ, ಹಿರೇತೊಗಲೇರಿ ಗ್ರಾಮದ ರೀ ಸರ್ವೆ ನಂ. 92/1P, ಇದರ ವಿಸ್ತೀರ್ಣ ಎಕರೆ-5, ಗುಂಟೆ-00 ವುಳ್ಳ ಜಮೀನು. ಮತ್ತು ರೀ ಸರ್ವೆ ನಂ. 92/2P, ಇದರ ವಿಸ್ತೀರ್ಣ ಎಕರೆ-2, ಗುಂಟೆ-05 ವುಳ್ಳ ಜಮೀನು, ಒಟ್ಟು ವಿಸ್ತೀರ್ಣ ಎಕರೆ-7, ಗುಂಟೆ-05, ಈ ಎರಡೂ ಜಮೀನುಗಳು ಒಂದಕ್ಕೊಂದು ಲಗತ್ತಾಗಿದ್ದು, ಒಟ್ಟು **ಚಕ್ಕುಬಂದಿ: ಪೂರ್ವಕ್ಕೆ** : ಪರಮೇಶ್ವರಯ್ಯ ಮತ್ತು ರಾಮಚಂದ್ರಪ್ಪ ಇವರ ಜಮೀನು , **ಪಶ್ಚಿಮಕ್ಕೆ**: ಗೋಪನಾಳ್ ಎಸ್.ಬಿ.ರಾಜಶೇಖರಪ್ಪ ಇವರ ಜಮೀನು, **ಉತ್ತರಕ್ಕೆ** : ರಸ್ತೆ ಮತ್ತು ಗೋಣಿವಾಡದ ಬಸವನಗೌಡ್ರ ಇವರ ಜಮೀನು, **ದಕ್ಷಿಣಕ್ಕೆ** : ಕರಿಯಪ್ಪ ಮತ್ತು ಗುಡ್ಡಪ್ಪ ಇವರ ಜಮೀನು.

ವಿ.ಸೂ : ಸದರಿ ಮೇಲ್ಕಾಣಿಸಿದ ಮೂಲ ನೋಂದಣಿ ಕ್ರಯ ಪತ್ರ ನಂಬರ್ 6270 dt.10.11.2000 ದಾಖಲೆ ಯಾರಾದರೂ ನೀಡಿದಲ್ಲಿ, ಅವರಿಗೆ ಸೂಕ್ತ ಬಹುಮಾನ ನೀಡಲಾಗುತ್ತದೆ.

ಪ್ರಕಟಣೆದಾರ

**ಟಿ.ವೆಂಕಟೇಶ್ ಬಿನ್ ಲೇಟ್ ತಿಮ್ಮಪ್ಪ**, ಬಸಾಪುರ ಗ್ರಾಮ, ದಾವಣಗೆರೆ ತಾಲ್ಲೂಕು.

**ಮೊಬೈಲ್ ಸಂಖ್ಯೆ : 7676505013**

# ಬಿಜೆಪಿ ಶ್ರೀಮಂತ, ಬಡವರ ಕೈ ಖಾಲಿ

## ದೇಶದ ಸಂಪತ್ತನ್ನು 5-6 ಕೋಟ್ಯಾಧೀಶರಿಗೆ ಕೊಡುವುದೂ ದೊಡ್ಡ ಭ್ರಷ್ಟಾಚಾರ



**(1ನೇ ಪುಟದಿಂದ)** ಮಾತನಾಡಿದರು. ನರೇಂದ್ರ ಮೋದಿ ಸರ್ಕಾರದ ಕಳೆದ ಹತ್ತು ವರ್ಷಗಳಲ್ಲಿ ಜನರ ಸಂಕಷ್ಟ ಹಾಗೂ ಸಮಸ್ಯೆಗಳು ಬಗೆಹರಿದಿಲ್ಲ. ಸಂಕಷ್ಟಗಳು ಇನ್ನಷ್ಟು ಹೆಚ್ಚಾಗಿವೆ. ಬಡವರು ಇನ್ನಷ್ಟು ಬಡವರಾಗಿದ್ದರೆ, ಶ್ರೀಮಂತರು ಇನ್ನಷ್ಟು ಶ್ರೀಮಂತರಾಗುತ್ತಿದ್ದಾರೆ ಎಂದು ಪ್ರಿಯಾಂಕ ಹೇಳಿದರು.

ಬಿಜೆಪಿ ದೇಶದಲ್ಲಷ್ಟೇ ಅಲ್ಲ, ವಿಶ್ವದಲ್ಲೇ ಶ್ರೀಮಂತವಾಗಿದೆ. 7 ಸಾವಿರ ಕೋಟಿ ರೂ.ಗಳನ್ನು ಬಿಜೆಪಿ ಚುನಾವಣಾ ಬಾಂಡ್ ಮೂಲಕ ಪಡೆದುಕೊಂಡಿದೆ. ಇದೇ ವೇಳೆ 16 ಲಕ್ಷ ಕೋಟಿ ರೂ.ಗಳ ಉದ್ಯಮಿಗಳ ಸಾಲವನ್ನು ಮನ್ನಾ ಮಾಡಿದ್ದಾರೆ ಎಂದು ಆರೋಪಿಸಿದರು.

ಜನರಿಗೆ ಗ್ಯಾರಂಟಿಗಳ ಮೂಲಕ ನೀಡಲು ಹಣ ಇಲ್ಲ ಎಂದು ಮೋದಿ ಸರ್ಕಾರ ಹೇಳುತ್ತದೆ. ಜನರಿಗೆ ಹಣ ನೀಡಿದರೆ ಆರ್ಥಿಕ ಸಂಕಷ್ಟವಾಗುತ್ತದೆ, ದೇಶ ಹಾಳಾಗುತ್ತದೆ ಎಂದು ಹೇಳಲಾಗುತ್ತದೆ. ಆದರೆ, ದೊಡ್ಡ ಬಂಡವಾಳಶಾಹಿಗಳಿಗೆ 16 ಲಕ್ಷ ಕೋಟಿ ರೂ.ಗಳ ಸಾಲ ಮನ್ನಾ ಮಾಡುವ ಹಣ ಹೇಗೆ ಬರುತ್ತದೆ? ಇದು ಜನರದ್ದೇ ಹಣ. ಅದೇ ಹಣವನ್ನು ನಾವು ಜನರಿಗೆ ನೀಡುತ್ತೇವೆ ಎಂದು ಪ್ರಿಯಾಂಕ ಪ್ರತಿಪಾದಿಸಿದರು.

ಒಂದೆಡೆ ಬಿಜೆಪಿ ಉದ್ಯಮಿಗಳಿಂದ ಚಂದಾ ಪಡೆದು ವಿಶ್ವದ ಶ್ರೀಮಂತ ಪಕ್ಷವಾಗಿದೆ. ಮತ್ತೊಂದೆಡೆ ಕಾಂಗ್ರೆಸ್ ಪಕ್ಷ ಚುನಾವಣೆ ಎದುರಿಸಬಾರದು ಎಂದು ಪಕ್ಷದ ಖಾತೆ ಬಂದ್ ಮಾಡಲಾಗಿದೆ ಎಂದು ಟೀಕಿಸಿದರು.

ದೇಶದ ಸಂಪತ್ತನ್ನು 5-6 ಕೋಟ್ಯಾಧೀಶರಿಗೆ ನೀಡುತ್ತಿರುವುದೂ ಸಹ ದೊಡ್ಡ ಭ್ರಷ್ಟಾಚಾರ. ಈ ಎಲ್ಲ ಸಂಪತ್ತು ನಿಮಗೇ ಸೇರಿದ್ದು. ಇದೆಲ್ಲವೂ ನಿಮ್ಮ ಯೋಜನೆಗಳಿಗಾಗಿ ಬಳಕೆಯಾಗಬೇಕಿತ್ತು. ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಸಂಪತ್ತನ್ನು ಜನರಿಗೆ ನೀಡಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ, ಈ ಸಂಪತ್ತನ್ನು ಜನರಿಗೆ ಕೊಡಲಾಗುವುದು ಎಂದವರು ಭರವಸೆ ನೀಡಿದರು.

ನಿಮ್ಮನ್ನು ಹಾಗೂ ದೇಶವನ್ನು ಬಲಪಡಿಸುವ ಸಲುವಾಗಿ ಕೇಂದ್ರ ಸರ್ಕಾರದಿಂದಲೂ ಗ್ಯಾರಂಟಿಗಳನ್ನು ಜಾರಿಗೆ ತರಲು ಕಾಂಗ್ರೆಸ್ ಪಕ್ಷ ಬಯಸುತ್ತಿದೆ. ಭಾರೀ ಬಹುಮತದಿಂದ ಕಾಂಗ್ರೆಸ್ ಗೆಲ್ಲಿಸಿದಲ್ಲಿ ಗ್ಯಾರಂಟಿಗಳನ್ನು ಜಾರಿಗೆ ತಂದು ದೇಶದ ಬೆಳವಣಿಗೆಗೆ ನೆರವಾಗಲಿದೆ ಎಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೋದಿ ನೇತೃತ್ವದ ಎನ್.ಡಿ.ಎ. ಸರ್ಕಾರ ಕಳೆದ ಹತ್ತು ವರ್ಷಗಳಲ್ಲಿ ಹಿಂದುಳಿದವರು, ದಲಿತರು, ಬಡವರು, ಅಲ್ಪಸಂಖ್ಯಾತರು, ರೈತರಿಗೆ ಏನು ನೆರವು ನೀಡಿದೆ ಎಂಬುದನ್ನು ಹೇಳಿ ಮತ ಕೇಳಬೇಕಿತ್ತು. ಆದರೆ, ಅವರು ಸುಳ್ಳು ಹೇಳಿ ಮತ ಕೇಳುತ್ತಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ಕೇಂದ್ರದಲ್ಲೂ ನಾವು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರುತ್ತೇವೆ. ವರ್ಷಕ್ಕೆ ಬಡ ಕುಟುಂಬದ ಮಹಿಳೆಯರಿಗೆ ಒಂದು ಲಕ್ಷ ರೂ. ಸಿಗಲಿದೆ. ನಿರುದ್ಯೋಗಿ ಯುವಕರಿಗೆ ಶಿಷ್ಯ ವೇತನದ ಮೂಲಕ ವರ್ಷಕ್ಕೆ ಲಕ್ಷ ರೂ. ನೀಡಲಾಗುವುದು. 25 ಲಕ್ಷ ರೂ.ಗಳ ಆರೋಗ್ಯ ವಿಮೆ ನೀಡುವ ಜೊತೆಗೆ ರೈತರ ಸಾಲ ಸಂಪೂರ್ಣ ಮನ್ನಾ ಮಾಡಲಾಗುವುದು. ಸ್ವಾಮಿನಾಥನ್ ಆಯೋಗದ ವರದಿ ಜಾರಿಗೆ ತರಲಾಗುವುದು. ಎಂ.ಎಸ್.ಪಿ.ಗಾಗಿ ಕಾನೂನು ಜಾರಿಗೆ ತರಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ವೇದಿಕೆಯ ಮೇಲೆ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣಜಿತ್ ಸಿಂಗ್ ಸುರ್ಜೇವಾಲ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಶಾಸಕರಾದ ಶಾಮನೂರು ಶಿವಶಂಕರಪ್ಪ, ಡಿ.ಜಿ. ಶಾಂತನಗೌಡ, ಶಿವಗಂಗಾ ಬಸವರಾಜ್, ಲತಾ ಮಲ್ಲಿಕಾರ್ಜುನ್, ಕೆ.ಎಸ್. ಬಸವಂತಪ್ಪ, ದೇವೇಂದ್ರಪ್ಪ, ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಮಾಜಿ ಸಚಿವರಾದ ಹೆಚ್. ಆಂಜನೇಯ, ಪರಮೇಶ್ವರ ನಾಯ್ಕ, ಕೆ.ಸಿ. ಕೊಂಡಯ್ಯ, ಮಾಜಿ ಶಾಸಕರಾದ ವಡ್ನಾಳ್ ರಾಜಣ್ಣ, ಎಸ್. ರಾಮಪ್ಪ, ಜಲಜಾ ನಾಯ್ಕ, ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್, ಯುವ ಕಾಂಗ್ರೆಸ್ ಅಧ್ಯಕ್ಷ ಹ್ಯಾರಿಸ್ ನಲಪಾಡ್ ಮತ್ತಿತರರು ಉಪಸ್ಥಿತರಿದ್ದರು.

> ರಾಜ್ಯ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಕೊಟ್ಟಿದೆ. ಬಿಜೆಪಿಯವರು ಕೇವಲ ಚೊಂಬು ಕೊಟ್ಟಿದ್ದಾರೆ. ನೀವು ಅವರಿಗೆ ಚುನಾವಣೆಯಲ್ಲಿ ಚೊಂಬು ಕೊಡಬೇಕು.
>
> **- ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ**

> ಈಗಿನ ಲೋಕಸಭಾ ಚುನಾವಣೆ ದ್ವೇಷ ಇಲ್ಲದ ಭಾರತ ರೂಪಿಸುವ ಉದ್ದೇಶದ್ದಾಗಿದೆ. ಅನ್ಯಾಯದ ವಿರುದ್ಧ ನ್ಯಾಯವನ್ನು ಗೆಲ್ಲಿಸಬೇಕಿದೆ. ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ನಮ್ಮೆಲ್ಲರನ್ನು ರಕ್ಷಿಸುವುದೇ ಈ ಚುನಾವಣೆ ಉದ್ದೇಶ.
>
> **- ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾ ಉಸ್ತುವಾರಿ ಸಚಿವ**

> ಮನಮೋಹನ್ ಸಿಂಗ್ ಅವರು ಹತ್ತು ವರ್ಷ ಪ್ರಧಾನ ಮಂತ್ರಿಯಾಗಿದ್ದಾಗ ಮೌನವಾಗಿ ಅಭಿವೃದ್ಧಿ ಕ್ರಾಂತಿ ಮಾಡಿದ್ದರು. ಈಗ ನರೇಂದ್ರ ಮೋದಿ ಅವರು ಏನೇ ಕೆಲಸ ಮಾಡಿದ್ದರೂ, ಸಿಂಗ್ ಅವರು ಹಾಕಿಕೊಟ್ಟ ಅಡಿಪಾಯದ ಮೇಲೆ ಮಾತ್ರ. ಮೋದಿ ನೀಡಿರುವ ಭರವಸೆಗಳೆಲ್ಲವೂ ಹುಸಿಯಾಗಿವೆ. ಮೋದಿ ಆಡಳಿತದಲ್ಲಿ ಕೆಲವೇ ಶ್ರೀಮಂತರಿಗೆ ಮಾತ್ರ ಅನುಕೂಲವಾಗಿದೆ.
>
> **- ಡಿ.ಜಿ. ಶಾಂತನಗೌಡ, ಶಾಸಕ**

> ಬರಗಾಲದಲ್ಲಿ ಬಾರದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು, ಈಗ ಚುನಾವಣಾ ಸಮಯದಲ್ಲಿ ಬಂದಿದ್ದಾರೆ. ಕೋರ್ಟ್ ಮೊರೆ ಹೋದ ನಂತರ ಸ್ವಲ್ಪ ಮಾತ್ರವೇ ಪರಿಹಾರ ಬಿಡುಗಡೆ ಮಾಡಿದ್ದಾರೆ. ಕರ್ನಾಟಕದಿಂದ ಹೆಚ್ಚು ಕಾಂಗ್ರೆಸ್ ಸಂಸದರು ಆಯ್ಕೆಯಾದರೆ, ಕೇಂದ್ರದಲ್ಲಿ ಕರ್ನಾಟಕದ ಧ್ವನಿ ಬಲವಾಗುತ್ತದೆ.
>
> **- ಲತಾ ಮಲ್ಲಿಕಾರ್ಜುನ್, ಶಾಸಕರು**

> ದಾವಣಗೆರೆ ಈ ಹಿಂದೆ ಕಾಂಗ್ರೆಸ್‌ನ ಭದ್ರಕೋಟೆ ಆಗಿತ್ತು. ಈಗ ಭದ್ರಕೋಟೆ ಮಾಡುವ ಅವಕಾಶ ಬಂದಿದೆ. ಕೋಮುವಾದಿ ಹಾಗೂ ರೈತ ವಿರೋಧಿ ಬಿಜೆಪಿಯನ್ನು ತಿರಸ್ಕರಿಸಬೇಕು.
>
> **- ಶಿವಗಂಗಾ ಬಸವರಾಜ್, ಶಾಸಕ**

> ಪರಿಶಿಷ್ಟರಿಗೆ ಹಣ ಮೀಸಲಿಡುವ ಎಸ್‌ಸಿಪಿ - ಟಿಎಸ್‌ಪಿ ಯೋಜನೆ ಜಾರಿಗೆ ತಂದಿದ್ದು ಕಾಂಗ್ರೆಸ್. ವಿಧಾನಸಭಾ ಚುನಾವಣೆಯಲ್ಲಿ ನುಡಿದಂತೆ ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ. ಮಹಿಳೆಯರು ವಿಶೇಷವಾಗಿ ಕಾಂಗ್ರೆಸ್ ಪರ ನಿಲ್ಲಬೇಕು.
>
> **- ಕೆ.ಎಸ್. ಬಸವಂತಪ್ಪ, ಶಾಸಕ**

> ಪ್ರಧಾನ ಮಂತ್ರಿ ನರೇಂದ್ರ ಮೋದಿ ಮುಖ ನೋಡಿ ಮತ ಹಾಕಿ ಹಾಗೂ ಮೋದಿ ಗ್ಯಾರಂಟಿ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ. ಆದರೆ, ನಮ್ಮ ಅಭ್ಯರ್ಥಿಯಾದ ಪ್ರಭಾ ಮಲ್ಲಿಕಾರ್ಜುನ್ ಅವರೇ ನಿಮಗೆ ಗ್ಯಾರಂಟಿ. ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ಕಾರಣದಿಂದಾಗಿ, ಜನರು ನಮಗೆ ಮತ ಹಾಕುವುದು ಗ್ಯಾರಂಟಿ.
>
> **- ಹೆಚ್. ಆಂಜನೇಯ, ಮಾಜಿ ಸಚಿವ**

> ನಮ್ಮ ನಡುವೆ ವಿಷ ಬೀಜ ಬಿತ್ತಲು ಕೆಲವರು ಪ್ರಯತ್ನ ನಡೆಸುತ್ತಿದ್ದಾರೆ. ಆ ಪ್ರಯತ್ನ ಫಲ ನೀಡುವುದಿಲ್ಲ. ದೊಡ್ಡ ಸಂಖ್ಯೆಯಲ್ಲಿ ಈ ಬಾರಿ ಜನರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ ಗೆಲ್ಲಿಸಲಿದ್ದಾರೆ.
>
> **- ಜಲಜಾ ನಾಯ್ಕ, ಮಾಜಿ ಶಾಸಕಿ**

> ಪ್ರಧಾನ ಮಂತ್ರಿ ನರೇಂದ್ರ ಮೋದಿ ನಾರಿ ಶಕ್ತಿ ಎಂದು ಮಾತನಾಡುತ್ತಾರೆ. ಆದರೆ, ನೂರಾರು ಮಹಿಳೆಯರ ಮಾನ ತೆಗೆದಿರುವ ಪ್ರಜ್ವಲ್ ರೇವಣ್ಣ ಪರ ಮತ ಪ್ರಧಾನಿ ಮತ ಕೇಳಿದ್ದಾರೆ. ಮಹಿಳೆಯರು ಬಿಜೆಪಿ ತಿರಸ್ಕರಿಸಿ ಕಾಂಗ್ರೆಸ್‌ಗೆ ಮತ ನೀಡಬೇಕು.
>
> **- ಡಿ. ಬಸವರಾಜ್, ಕೆ.ಪಿ.ಸಿ.ಸಿ. ಪ್ರಧಾನ ಕಾರ್ಯದರ್ಶಿ**

> ಸಂವಿಧಾನವನ್ನು ಉಳಿಸಲು ನಾವು ಹೋರಾಟ ನಡೆಸುತ್ತಿದ್ದೇವೆ. ಇಂದಿರಾ ಗಾಂಧಿ, ರಾಜೀವ್ ಗಾಂಧಿ ಅವರು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದರು. ಸೋನಿಯಾ ಗಾಂಧಿ ಅವರು ಹತ್ತು ವರ್ಷ ಕಾಲ ಪ್ರಧಾನ ಮಂತ್ರಿ ಹುದ್ದೆಯನ್ನು ತ್ಯಾಗ ಮಾಡಿದ್ದರು. ಇಂತಹ ಪರಿವಾರಕ್ಕೆ ಕಾಂಗ್ರೆಸ್‌ನವರು ಸೇರಿದ್ದೇವೆ.
>
> **- ಹ್ಯಾರಿಸ್ ನಲಪಾಡ್, ಯುವ ಕಾಂಗ್ರೆಸ್ ಅಧ್ಯಕ್ಷ**

### ಕರ್ನಾಟಕದ ರೀತಿಯಲ್ಲೇ ದೇಶದ ರಾಜಕೀಯ ಸರಿಪಡಿಸಿ

ದೇಶಕ್ಕೆ ಈಗ ಹೊಸ ಪ್ರಧಾನ ಮಂತ್ರಿ ಆಯ್ಕೆ ಮಾಡುವ ಸಮಯ ಬಂದಿದೆ. ಕರ್ನಾಟಕದ ರೀತಿಯಲ್ಲೇ ದೇಶದ ರಾಜಕೀಯವನ್ನು ಸರಿಪಡಿಸುವ ಸಮಯ ಬಂದಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಕರೆ ನೀಡಿದ್ದಾರೆ. ಈ ದೇಶ ನಿಮ್ಮದು, ಈ ದೇಶದ ಜವಾಬ್ದಾರಿ ನಿಮ್ಮದು.

ನಿಮ್ಮ ಸಂಘರ್ಷ ಹಾಗೂ ನಿಮ್ಮ ಭವಿಷ್ಯದ ಬಗ್ಗೆ ಯೋಚಿಸಿ. ನಿಮ್ಮ ಸಮಸ್ಯೆ, ಕಷ್ಟ ಸುಖಗಳ ಬಗ್ಗೆ ಯೋಚಿಸಿ, ಗ್ಯಾರಂಟಿ ಗಳ ಪರವಾಗಿ ಮತ ಚಲಾಯಿಸಿ ಎಂದವರು ಹೇಳಿದರು.

### ಕೊರೊನಾ ಲಸಿಕೆಯಿಂದ ಹೃದಯಾಘಾತ : ಪ್ರಿಯಾಂಕ ಕಳವಳ

ಕೊರೊನಾ ಲಸಿಕೆ ಪ್ರಮಾಣ ಪತ್ರದ ಮೇಲೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಚಿತ್ರ ಇತ್ತು. ಆದರೆ, ಈ ಲಸಿಕೆ ಪಡೆದ ಹಲವರಿಗೆ ಹಠಾತ್ತನೆ ಹೃದಯಾಘಾತವಾಗುವ ಸಾಧ್ಯತೆ ಇದೆ ಎಂದು ಇತ್ತೀಚಿನ ವರದಿ ತಿಳಿಸಿದೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಹೇಳಿದರು. ಲಸಿಕೆಯ ಕಾರಣದಿಂದ ಆರೋಗ್ಯವಾಗಿದ್ದ ಯುವಕರಿಗೆ ಹೃದಯಾಘಾತವಾಗುತ್ತಿದೆ ಎಂದವರು ಕಳವಳ ವ್ಯಕ್ತಪಡಿಸಿದರು.

ದೇಶದಲ್ಲಿ ಒಂದೇ ಕಂಪನಿ ಲಸಿಕೆ ತಯಾರಿಸಿತ್ತು. ಈ ಕಂಪನಿ ಮೋದಿಯವರಿಗೆ 51 ಕೋಟಿ ರೂ. ದೇಣಿಗೆ ಕೊಟ್ಟಿದೆ ಎಂದೂ ಅವರು ಹೇಳಿದರು.

ಕೇಂದ್ರ ತನಿಖಾ ಸಂಸ್ಥೆಗಳ ಮೂಲಕ ದಾಳಿ ನಡೆಸಿ ಚುನಾವಣಾ ಬಾಂಡ್‌ಗಳಿಗೆ ಹಣ ಪಡೆಯಲಾಗಿದೆ. ಪ್ರಕರಣಗಳನ್ನು ವಾಪಸ್ ಪಡೆದು ಹಣ ಪಡೆದಿದ್ದಾರೆ. ಇಂತಹ ಸಾಕಷ್ಟು ಉದಾಹರಣೆಗಳಿವೆ. ಕೇಂದ್ರ ಸರ್ಕಾರ ಭ್ರಷ್ಟವಾಗಿದೆ ಎಂದವರು ಟೀಕಿಸಿದರು.

### ಉದ್ಯೋಗದ ಮಾರ್ಗಗಳು ಮುಚ್ಚುತ್ತಿವೆ

ಪೋಷಕರು ಎಷ್ಟೇ ಕಷ್ಟಪಟ್ಟು ಮಕ್ಕಳಿಗೆ ವಿದ್ಯಾಭ್ಯಾಸ ನೀಡಿದರೂ ಸೂಕ್ತ ಉದ್ಯೋಗ ಸಿಗುವ ಗ್ಯಾರಂಟಿ ಇಲ್ಲ. ಕೇಂದ್ರ ಸರ್ಕಾರ ಉದ್ಯೋಗ ಸೃಷ್ಟಿಯುವ ಯಾವುದೇ ಯೋಜನೆ ರೂಪಿಸಿಲ್ಲ. ಉದ್ಯೋಗ ರೂಪಿಸುವ ಮಾರ್ಗಗಳೆಲ್ಲವೂ ಮುಚ್ಚುತ್ತಿವೆ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ ಹೇಳಿದರು. ನೋಟು ರದ್ದತಿ ಹಾಗೂ ಅವೈಜ್ಞಾನಿಕ ಜಿ.ಎಸ್.ಟಿ. ಹೇರಿಕೆ ಕಾರಣದಿಂದ ಸಣ್ಣ ಹಾಗೂ ಮಧ್ಯಮ ಉದ್ಯಮಗಳು ಕುಸಿದಿವೆ. ಸರ್ಕಾರಿ ಉದ್ಯಮಗಳನ್ನು ಖಾಸಗೀಕರಣ ಮಾಡಿ ಬಂಡವಾಳಶಾಹಿಗಳಿಗೆ ನೀಡಲಾಗಿದೆ. ಇದರಿಂದ ಮೀಸಲಾತಿ ನಾಶವಾಗುತ್ತಿದೆ ಹಾಗೂ ಉದ್ಯೋಗಾವಕಾಶಗಳು ಕಡಿಮೆಯಾಗಿವೆ ಎಂದವರು ತಿಳಿಸಿದರು.

# ಲಿಂಗತ್ವ ಅಲ್ಪಸಂಖ್ಯಾತರೊಂದಿಗೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸಂವಾದ

## ಸಮುದಾಯದ ಸಂಕಷ್ಟಕ್ಕೆ ಸ್ಪಂದಿಸುವ ಭರವಸೆ



ದಾವಣಗೆರೆ, ಮೇ 4 - ಲಿಂಗತ್ವ ಅಲ್ಪಸಂಖ್ಯಾತರ ಪ್ರತಿಯೊಂದು ಸಂಕಷ್ಟಕ್ಕೂ ನಾನು ಸ್ಪಂದಿಸುತ್ತೇನೆ. ಅವರ ಧ್ವನಿಯಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೂಲಕ ಸೌಲಭ್ಯ ಕಲ್ಪಿಸಲಾಗುವುದು ಎಂದು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ತಿಳಿಸಿದರು.

ಲಿಂಗತ್ವ ಅಲ್ಪಸಂಖ್ಯಾತರ ಸಂಕಷ್ಟಗಳನ್ನು ಆಲಿಸಿದ ನಂತರ ತಮ್ಮನ್ನು ಭೇಟಿ ಮಾಡಿದ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಭಾ ಅವರು, ಈ ಮೊದಲು ನಮ್ಮನ್ನು ಭೇಟಿ ಮಾಡಿ ತಮ್ಮ ಸಂಕಷ್ಟಗಳನ್ನು ಹೇಳಿಕೊಂಡಿದ್ದರು. ಅವುಗಳಿಗೆ ನಾವು ಪರಿಹರಿಸುವ ಕೆಲಸ ಮಾಡಿದ್ದೆವು ಎಂದರು.

ಇಂದು ಮತ್ತೆ ಅವರನ್ನು ಭೇಟಿ ಮಾಡಲಾಗಿದ್ದು, ಸರ್ಕಾರದ ಯೋಜನೆಗಳನ್ನು ಪಡೆಯಲು ತಾಂತ್ರಿಕ ತೊಂದರೆ ಇರುವ ಬಗ್ಗೆ ತಿಳಿಸಿದ್ದು, ಅವುಗಳನ್ನು ಸೂಕ್ತ ಸಮರ್ಪಕ ರೀತಿಯಲ್ಲಿ ಬಗೆಹರಿಸಲಾಗುವುದು ಎಂದು ಹೇಳಿದರು.

ಮಹಿಳೆಯರಿಗೆ ಸ್ವಾವಲಂಬಿ ಜೀವನ ನಡೆಸಲು ಸರ್ಕಾರ ಯಾವ ರೀತಿಯಲ್ಲಿ ಕ್ರಮ ಕೈಗೊಂಡಿದೆ. ಅದೇ ಲಿಂಗತ್ವ ಅಲ್ಪಸಂಖ್ಯಾತರನ್ನು ಸ್ವಾವಲಂಬಿ ಜೀವನ ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಮೊದಲ ಬಾರಿಗೆ ಲಿಂಗತ್ವ ಅಲ್ಪಸಂಖ್ಯಾತರೊಂದಿಗೆ ಅಭ್ಯರ್ಥಿಯೊಬ್ಬರು ಸಂವಾದ ನಡೆಸಿ ಅವರ ಸಂಕಷ್ಟಕ್ಕೆ ಸ್ಪಂದಿಸುವ ಕೆಲಸವನ್ನು ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು ಮಾಡಿದ್ದಾರೆ.

# ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಬೆಂಬಲಿಸಲು ಬ್ರಾಹ್ಮಣ ಸಮಾಜಕ್ಕೆ ಕರೆ



ದಾವಣಗೆರೆ, ಮೇ 4 - ದಾವಣಗೆರೆ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರನ್ನು ಬೆಂಬಲಿಸುವಂತೆ ಬ್ರಾಹ್ಮಣ ಸಮಾಜ ಬಾಂಧವರಲ್ಲಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಕೇಳಿಕೊಂಡರು. ಬ್ರಾಹ್ಮಣ ಸಮಾಜ ಸಂಘದ ಆವರಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ತಮ್ಮನ್ನು ಗೌರವಿದ ಸಂದರ್ಭದಲ್ಲಿ ಮಾತನಾಡಿದ ಎಸ್ಸೆಸ್, ಕಾಂಗ್ರೆಸ್ ಪಕ್ಷದ ಗೆಲುವಿಗೆ ಸಹಕಾರ ನೀಡುವಂತೆ ಕರೆ ನೀಡಿದರು.

ಜಯತೀರ್ಥಾಚಾರ್, ಕಂಪ್ಲಿ ಗುರುರಾಜಾಚಾರ್, ಮಣ್ಣೂರ ಪಾಂಡುರಂಗಾಚಾರ್, ಮಣ್ಣೂರ ಗೋಪಾಲಾಚಾರ್, ಸಂಪನ್ನ ಮುತಾಲಿಕ್ ಇನ್ನೂ ಅನೇಕ ಬ್ರಾಹ್ಮಣ ಸಮಾಜದವರು, ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ಮತ್ತು ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಸ್ವಕುಳಸಾಳಿ ಸಮಾಜದಿಂದ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಎಸ್ಸೆಸ್ಸೆಂಗೆ ಬೆಂಬಲ



ದಾವಣಗೆರೆ, ಮೇ 4- ದಾವಣಗೆರೆ ಲೋಕಸಭಾ ಚುನಾವಣೆಯ ಕಾಂಗ್ರೆಸ್ ಅಭ್ಯರ್ಥಿ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಸ್ವಕುಳ ಸಾಳಿ ಸಮಾಜದ (ನೇಕಾರ) ವತಿಯಿಂದ ಶುಭ ಹಾರೈಸಿ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರನ್ನು ಭೇಟಿ ಮಾಡಲಾಯಿತು.

ಸ್ವಕುಳಸಾಳಿ ಸಮಾಜದ ಅಧ್ಯಕ್ಷ ಜಿ.ಪಿ. ಮೋಹನ್, ಕಾರ್ಯದರ್ಶಿ ಧರ್ಮರಾಜ್ ಏಕಬೋಟೆ, ಖಜಾಂಚಿ ಗಣೇಶ ಕ್ಷೀರ ಸಾಗರ್, ಸಮಾಜದ ಹಿರಿಯರಾದ ಏಕಬೋಟೆ ತಿಪ್ಪೇಸ್ವಾಮಿ, ಆನಂದ ಸಫಾರೆ, ಸಂಘಟನಾ ಕಾರ್ಯದರ್ಶಿ ಮಂಜು ನಾಥ್ ಕಾಂಬ್ಳೆ, ರೋಖಡೆ ಕೃಷ್ಣ ಮೂರ್ತಿ, ಮಹಿಳಾ ಮಂಡಳಿಯ ವಿಜಯ ಧರ್ಮರಾಜ್ ಏಕಬೋಟೆ ಇನ್ನಿತರರು ಸಚಿವರನ್ನು ಭೇಟಿ ಮಾಡಿದ್ದರು.

### ನಗರದಲ್ಲಿ ಇಂದು ಕಣ್ಣಿನ ಪರೀಕ್ಷೆ

ನೇತ್ರಾಲಯ ಐ ಕೇರ್ ಸೆಂಟರ್‌ನಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರವರೆಗೆ ಸಕ್ಕರೆ ಕಾಯಿಲೆ ಇರುವವರಿಗೆ ಉಚಿತವಾಗಿ ಕಣ್ಣಿನ ಪರೀಕ್ಷೆಯನ್ನು ಮಾಡಲಾಗುತ್ತದೆ. ಸಂಪರ್ಕಿಸಿ : 7892424162.

# ಮೋದಿ ಸುಳ್ಳನ್ನೇ ಮಾರುಕಟ್ಟೆ ಮಾಡಿಕೊಂಡಿದ್ದಾರೆ : ಮುಖ್ಯಮಂತ್ರಿ ಸಿದ್ದರಾಮಯ್ಯ





ದಾವಣಗೆರೆ, ಮೇ 4 - ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ಕಳೆದ ಹತ್ತು ವರ್ಷಗಳಲ್ಲಿ ಬಡವರ ಅಭಿವೃದ್ಧಿಗೆ ಏನೂ ಮಾಡಿಲ್ಲ. ಜನರಿಗೆ ಬರೀ ಸುಳ್ಳು ಹೇಳಿದ್ದಾರೆ. ಸುಳ್ಳನ್ನೇ ಮಾರುಕಟ್ಟೆ ಮಾಡಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತರಾಟೆಗೆ ತೆಗೆದುಕೊಂಡಿದ್ದಾರೆ.

ನಗರದ ಬಾಪೂಜಿ ಬ್ಯಾಂಕ್ ಸಮುದಾಯ ಭವನ ದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪ್ರಭಾ ಮಲ್ಲಿಕಾರ್ಜುನ್ ಪರ ಆಯೋಜಿಸಲಾಗಿದ್ದ ಪ್ರಚಾರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಪ್ರಧಾನಿ ಮೋದಿ ಅವರು ಧರ್ಮ, ಹಿಂದುತ್ವ, ಜಾತಿ ಹೆಸರಿನಲ್ಲಿ ಸಮಾಜ ಒಡೆಯುವ ಕೆಲಸ ಮಾಡಿದ್ದಾರೆ. ದ್ವೇಷದ ರಾಜಕಾರಣ ಮಾಡಿ ಜನರ ಮನ ಕೆಡಿಸಿದ್ದಾರೆ. ಧರ್ಮದ ಹೆಸರಿನಲ್ಲಿ ಮನಸ್ಸುಗಳನ್ನು ಒಡೆದಿದ್ದಾರೆ. ಹೀಗಾಗಿಯೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೇಶವನ್ನು ಒಗ್ಗೂಡಿಸಲು ಭಾರತ್ ಜೋಡೋ ಪಾದಯಾತ್ರೆ ಮಾಡಿದರು ಎಂದು ತಿಳಿಸಿದರು.

ಕಾಂಗ್ರೆಸ್ ಪಕ್ಷ ರೈತರು, ದಲಿತರು, ಬಡವರು, ಹಿಂದುಳಿದವರಿಗೆ ಸಹಾಯ ಮಾಡಿದೆ. ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿದ್ದು ಕಾಂಗ್ರೆಸ್. ದೇಶಕ್ಕೆ ಸ್ವಾತಂತ್ರ್ಯ ದೊರೆತ ನಂತರವೇ ಜನಸಂಘ ಸ್ಥಾಪಿಸಲಾಗಿತ್ತು. ನಂತರ ಈ ಜನಸಂಘವೇ ಬಿಜೆಪಿ ಆಯಿತು ಎಂದು ಸಿದ್ದರಾಮಯ್ಯ ಹೇಳಿದರು.

ಮೀಸಲಾತಿಯನ್ನು ಬಿಜೆಪಿ ವಿರೋಧಿಸುತ್ತಾ ಬಂದಿದೆ. ಬಿಜೆಪಿಯ ಉಪಾಧ್ಯಕ್ಷರಾಗಿದ್ದ ರಾಮಾ ಜೋಯಿಸ್ ಅವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ವಿರೋಧಿಸಿ, ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಮಂಡಲ್ ಆಯೋಗದ ವರದಿಯನ್ನೂ ಬಿಜೆಪಿ ವಿರೋಧಿಸಿತ್ತು ಎಂದವರು ತಿಳಿಸಿದರು.

# ಪ್ರಜ್ವಲ್ ಪ್ರಕರಣ: ರಾಜ್ಯವೇ ತಲೆ ತಗ್ಗಿಸುವಂತಾಗಿದೆ

ದಾವಣಗೆರೆ, ಮೇ 4- ಹಾಸನ ಸಂಸದ ಪ್ರಜ್ವಲ್ ರೇವಣ್ಣನ ಅಶ್ಲೀಲ ವಿಡಿಯೋ ದೇಶದ್ಯಾಂತ ದೊಡ್ಡ ಸಂಚಲನ ಮಾಡಿದ್ದು, ಇಂತಹ ನಾಚಿಕೆಗೇಡಿನ ಕೆಲಸದಿಂದ ರಾಜ್ಯವೇ ತಲೆ ತಗ್ಗಿಸುವಂತಾಗಿದೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ದೂರಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖಂಡ ದೇವರಾಜೇಗೌಡ ಅವರು, ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣದ ಬಗ್ಗೆ ಅಮಿತ್ ಶಾ, ಪ್ರಧಾನಿ ಮೋದಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ತಿಳಿಸಿದ್ದರು ಮತ್ತು ಚುನಾವಣೆಗೂ 2 ದಿನ ಮುಂಚೆಯೇ ಈ ಹಗರಣದ ಬಗ್ಗೆ ನನಗೆ ಗೊತ್ತಾಯಿತು ಎಂದು ಶಾಸಕ ಸಿ.ಟಿ. ರವಿ ಅವರೇ ಹೇಳಿದ್ದಾರೆ ಎಂದರು. ಬಿಜೆಪಿಯವರು ನಾರಿ ಶಕ್ತಿ ಎಂದು ಹೇಳುತ್ತಾರೆ. ಉನ್ನಾವೋದಿಂದ ಉತ್ತರಾಖಂಡವರೆಗೆ ಹೆಣ್ಣು ಮಕ್ಕಳ ಅಪರಾಧಿಗಳಿಗೆ ಮೋದಿ ಅವರು ಮೌನ ಬೆಂಬಲ ನೀಡುತ್ತಿದ್ದಾರೆ. ಆದ್ದರಿಂದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಮತ ನೀಡಬಾರದೆಂದು ಮನವಿ ಮಾಡಿದರು.

ಪಾಲಿಕೆ ಸದಸ್ಯ ಕೆ. ಚಮನ್ ಸಾಬ್, ಪಕ್ಷದ ಜಿಲ್ಲಾ ಮುಖಂಡರಾದ ಹುಲಿಕಟ್ಟೆ ಚಂದ್ರಪ್ಪ, ಕೆ.ಎಂ. ಮಂಜುನಾಥ್, ಎಸ್.ಎಂ. ಜಯಪ್ರಕಾಶ್, ಡಿ. ಶಿವಕುಮಾರ್, ಬಿ.ಎಸ್. ಸುರೇಶ್, ಮುಬಾರಕ್ ಸೇರಿದಂತೆ ಇತರರು ಸುದ್ದಿಗೋಷ್ಠಿಯಲ್ಲಿದ್ದರು.


ಮಳಿಗೆ ಬಾಡಿಗೆಗಿದೆ

ಕೆ.ಬಿ.ಬಡಾವಣೆ, ಲಾಯರ್ ರಸ್ತೆ, 1ನೇ ಮಹಡಿಯಲ್ಲಿ

40x44 ಅಡಿ, ಫರ್ನೀಚರ್ ಸಮೇತ

ಎ.ಸಿ. ಸೌಲಭ್ಯವಿರುವ LIC ಆಫೀಸ್ ಮತ್ತು ಬ್ಯಾಂಕ್‌ಗೆ ಅನುಕೂಲವಾದ ಮಳಿಗೆ ಬಾಡಿಗೆಗಿದೆ.

ಮಧ್ಯವರ್ತಿಗಳೂ ಸಹ ಸಂಪರ್ಕಿಸಬಹುದು.

97384 62378, 88928 44854, 96665 53640



Garden VARELI



ಹಬ್ಬದ ಸಂಭ್ರಮಕ್ಕೆ ಕಳೆ ನೀಡಲು ಇಲ್ಲಿದೆ ಇನ್ನೂ ಒಂದು ಕಾರಣ !

ಪ್ರೇರಕ ಡಿಸೈನ್‌ಗಳು. ಮನಮೋಹಕ ಪ್ರಿಂಟ್‌ಗಳು !


40%ರ ತನಕ ಡಿಸ್ಕೌಂಟ್ ಸೆಕೆಂಡ್ ಸೇಲ್

ಮಾರಾಟವು 13-05-2024 ರಂದು ಕೊನೆಗೊಳ್ಳುತ್ತದೆ

ಸಮಯ- ಬೆಳಗ್ಗೆ ಗಂಟೆ 10.00 ರಿಂದ ರಾತ್ರಿ ಗಂಟೆ 8.00 (ರವಿವಾರವೂ ತೆರೆದಿರುತ್ತದೆ)

ಸೀರೆಗಳು ₹395 ರಿಂದ ಆರಂಭ | ಡ್ರೆಸ್ ಮೆಟೀರಿಯಲ್ ₹74/ಮೀ.ನಿಂದ ಆರಂಭ | ಸಲ್ವಾರ್ ಸೆಟ್ ಪೀಸ್‌ಗಳ ವಿಶೇಷ ಶ್ರೇಣಿ

ರಂಗ್ ಮಹಲ್, #68, 2ನೇ ಮುಖ್ಯ ರಸ್ತೆ, ಅಕ್ಕಮಹಾದೇವಿ ರಸ್ತೆ, ಪಿ.ಜೆ. ವಿಸ್ತರಣೆ, ದಾವಣಗೆರೆ - 577 002.




KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas